ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

23 ಜುಲೈ, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 132 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಭಾರತದ ಪಿ.ವಿ.ಸಿಂಧು ಅವರು ಸ್ವದೇಶದ ಯುವ ಆಟಗಾರ್ತಿ ಉನ್ನತಿ ಹೂಡಾ ಅವರ ಸ್ಫೂರ್ತಿಯುತ ಹೋರಾಟವನ್ನು ಬದಿಗೊತ್ತಿ, ಚೀನಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ 2ನೇ ಸುತ್ತಿಗೆ ತಲುಪಿದರು.



ಸರ್ ಗ್ಯಾರಿ ಸೋಬರ್ಸ್ ಯುಗ ಅಂತ್ಯ » 2


2 ಚಿನ್ನ, 4 ಬೆಳ್ಳಿ ಪದಕ ಗೆದ್ದ ಭಾರತ » 3


ಗೆಲುವಿನ ಹಳಿಗೆ ಮರಳಲು ಭಾರತ ತವಕ » 4


# ಪ್ರಧಾನಿ ವಿದ್ಯಾರ್ಥಿಗಳ ಕ್ಷಮೆಯಾಚಿಸಲಿ

- ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಲಿ
- ದೌರ್ಜನ್ಯ ಎಸಗಿದವರ ವಿರುದ್ಧ ಕ್ರಮಕ್ಕೆ ರಾಹುಲ್ ಗಾಂಧಿ ಆಗ್ರಹ

• ಪ್ರಜೋದಯ ವರದಿ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಅಹಂಕಾರ ಬಿಟ್ಟು ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳ ಆಕ್ರೋಶದ ಕೂಗನ್ನು ಆಲಿಸಬೇಕೆಂದು ಒತ್ತಾಯಿಸಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲವಾಗಿ 3 ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ.

ಎಐಸಿಸಿ ಪ್ರಧಾನ ಕಚೇರಿಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ಭಯೋತ್ಪಾದಕರಲ್ಲ. ಅವರು ನ್ಯಾಯಯುತ ಶಿಕ್ಷಣ ವ್ಯವಸ್ಥೆಯನ್ನು ಕೇಳುತ್ತಿದ್ದಾರೆ. ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದವರ ಮೇಲೆ ಬಲಪ್ರಯೋಗ ಸರಿಯಲ್ಲ, ಈ ಕುರಿತು ಪ್ರಧಾನಿ ನರೇಂದ್ರ ಮೋದಿ ವಿದ್ಯಾರ್ಥಿಗಳಲ್ಲಿ ಕ್ಷಮೆಯಾಚಿಸಬೇಕು. ಕರ್ತವ್ಯ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲರಾಗಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಕ್ಷಣ ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು. ವಿದ್ಯಾರ್ಥಿಗಳ ಮೇಲೆ ಹಲ್ಲೆ ಹಾಗೂ ದೌರ್ಜನ್ಯ ಎಸಗಿದವರು, ಹಲ್ಲೆಗೆ ಕಾರಣರಾದವರನ್ನು ಹೊಣೆಗಾರರನ್ನಾಗಿಸಬೇಕು ಮತ್ತು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

**ಶಿಕ್ಷಣ ವ್ಯವಸ್ಥೆ ಭ್ರಷ್ಟಗೊಂಡಿದೆ**

ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣಗಳಿಂದಾಗಿ ದೇಶದ ಶಿಕ್ಷಣ ವ್ಯವಸ್ಥೆಯ ಕುರಿತು ಕಳವಳ ವ್ಯಕ್ತಪಡಿಸಿದ ಅವರು, ನಮ್ಮ ವಿದ್ಯಾರ್ಥಿಗಳ ಮೇಲೆ ಭಾರೀ ಮಾನಸಿಕ ಒತ್ತಡ ಹೇರಲಾಗುತ್ತಿದೆ. ಕೊನೆಯ ಕ್ಷಣದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದು ಅವರಿಗೆ ಹೇಳಲಾಗುತ್ತದೆ. ಜಗತ್ತಿನ ಅತ್ಯುತ್ತಮ ಶಿಕ್ಷಣ ವ್ಯವಸ್ಥೆಗೆ ಹೆಸರುವಾಸಿಯಾಗಿದ್ದ ನಮ್ಮ ಶಿಕ್ಷಣ ಇಂದು ಭ್ರಷ್ಟಗೊಂಡಿದೆ ಎಂಬುದು ಎಲ್ಲರಿಗೂ ಸ್ಪಷ್ಟವಾಗಿದೆ. ಹೋರಾಡುತ್ತಿರುವ



ಸಾವಿರಾರು ವಿದ್ಯಾರ್ಥಿಗಳೂ ಸುಮ್ಮನೆ ಹೇಳುತ್ತಿಲ್ಲ. ಕಳೆದ ದಶಕದಲ್ಲಿ 152 ಪ್ರಶ್ನೆ ಪತ್ರಿಕೆಗಳು ಸೋರಿಕೆ ಆಗಿರುವುದು ನಮಗೆ ತಿಳಿದಿದೆ. ಅಂದರೆ ಸರಾಸರಿ ತಿಂಗಳಿಗೆ ಒಂದು ಪ್ರಶ್ನೆ ಪತ್ರಿಕೆ ಸೋರಿಕೆಯಾಗುತ್ತಿದೆ ಎಂದು ಟೀಕಿಸಿದರು.

ದೇಶದ ಕಳಪೆ ಶಿಕ್ಷಣ ವ್ಯವಸ್ಥೆಯಿಂದಾಗಿ ಸುಮಾರು 7.5 ಕೋಟಿ ವಿದ್ಯಾರ್ಥಿಗಳು ಹಾಗು ಅವರ ಕುಟುಂಬಗಳು ತೊಂದರೆಗೆ ಒಳಗಾಗಿವೆ. ಅವರೆಲ್ಲರೂ ಮಧ್ಯಮ ವರ್ಗದ ಮತ್ತು ಬಡ ಕುಟುಂಬದವರು. ಈ ಹಗರಣಗಳಲ್ಲಿ ಯಾರೊಬ್ಬರಿಗೂ ಶಿಕ್ಷೆಯಾಗಿಲ್ಲ. ಜನರ ಗುಂಪೊಂದು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ನಾಶಪಡಿಸುತ್ತಿದೆ. ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿರುವುದಕ್ಕೆ ನ್ಯಾಯವಾದ ಕಾರಣಗಳಿವೆ. ಅವರದ್ದು ಮೂರು ಪ್ರಮುಖ ಬೇಡಿಕೆಗಳಿವೆ. ಅವುಗಳನ್ನು ಸರ್ಕಾರ ಈಡೇರಿಸಲಿ ಎಂದು ಆಗ್ರಹಿಸಿದರು.

ಭಾರತದಲ್ಲಿ ನೀಟ್ ಆಕಾಂಕ್ಷಿಗಳ ವಾರ್ಷಿಕ ಕೋಚಿಂಗ್ ವೆಚ್ಚವನ್ನು 1.32 ಲಕ್ಷ ಕೋಟಿ ಎಂದು ಅಂದಾಜಿಸಿದ ರಾಹುಲ್ ಗಾಂಧಿ, ಇದು ದೇಶದ ವಾರ್ಷಿಕ ಶಿಕ್ಷಣ ಬಜೆಟ್ ಆದ 1.4 ಲಕ್ಷ ಕೋಟಿಗೆ ಬಹುತೇಕ ಸಮನಾಗಿದೆ. ಈ ಭ್ರಷ್ಟ ವ್ಯವಸ್ಥೆಯು ಬಡವರು ಮತ್ತು ಮಧ್ಯಮ ವರ್ಗದವರನ್ನು ಶಿಕ್ಷಣದಿಂದ ಹೊರಗಿಟ್ಟಿದೆ. ಈ ವ್ಯವಸ್ಥೆಯು ಕೇವಲ ಶ್ರೀಮಂತರಿಗೆ ಮಾತ್ರ ಸೀಮಿತವಾಗಿದೆ. ಅದರಲ್ಲಿ ಬಡವರಿಗೆ ಜಾಗವಿಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಚಿವ ಧರ್ಮೇಂದ್ರ ಪ್ರಧಾನ್ ದೇಶದ ಶಿಕ್ಷಣ ವ್ಯವಸ್ಥೆಯನ್ನು ನಾಶಪಡಿಸಿದ್ದಾರೆ. 40 ಲಕ್ಷ ರೂ. ಹೊಂದಿರುವ ಯಾರಾದರೂ ಸರ್ಕಾರಿ ಉದ್ಯೋಗ ಪಡೆಯಬಹುದು. ಇಂದು ಭಾರತದಲ್ಲಿ ಶಿಕ್ಷಣವು ತುಂಬಾ ದುಬಾರಿಯಾಗಿದ್ದು, ಮಧ್ಯಮ ವರ್ಗದವರು ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರಿ ಉದ್ಯೋಗಗಳ ಹೆಸರಿನಲ್ಲಿ ವಿದ್ಯಾರ್ಥಿಗಳಿಂದ ಕೋಟ್ಯಾಂತರ ರೂ. ಪಡೆಯಲಾಗುತ್ತದೆ ಮತ್ತು 40-50 ಲಕ್ಷ ರೂ. ಪಾವತಿಸುವವರಿಗೆ ಹಿಂಬಾಗಿಲಿನಿಂದ ಪಾಸ್ ನೀಡಲಾಗುತ್ತದೆ. ಇಂದು ವಿದ್ಯಾರ್ಥಿಗಳು ಮೋಸ ಹೋಗಿದ್ದಾರೆಂದು ಭಾವಿಸುತ್ತಾರೆ ಎಂದರು.

> **10 ವರ್ಷದಲ್ಲಿ 152 ಪ್ರಶ್ನೆಪತ್ರಿಕೆ ಸೋರಿಕೆ**
>
> ದೇಶದಲ್ಲಿ ಕಳೆದ 10 ವರ್ಷಗಳಲ್ಲಿ ದೇಶದಲ್ಲಿ 152 ಪ್ರಶ್ನೆಪತ್ರಿಕೆ ಸೋರಿಕೆ ಘಟನೆಗಳು ಸಂಭವಿಸಿವೆ. ಆದರೆ, ಈವರೆಗೆ ಯಾರೊಬ್ಬರಿಗೂ ಶಿಕ್ಷೆಯಾಗಿಲ್ಲ. ಯಾರೋ ಒಬ್ಬರು ಅಥವಾ ಜನರ ಗುಂಪು ಭಾರತದ ಅತ್ಯಂತ ಮೌಲ್ಯಯುತ ಆಸ್ತಿಯಾಗಿರುವ ಶಿಕ್ಷಣ ವ್ಯವಸ್ಥೆಯನ್ನು ನಾಶಪಡಿಸುತ್ತಿದೆ. ನಮ್ಮ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳುಮಾಡುತ್ತಿದೆ. ಆದರೆ, ಸರ್ಕಾರ ಏನು ಮಾಡುತ್ತಿದೆ ಯಾರೊಬ್ಬರಿಗೂ ಶಿಕ್ಷೆ ವಿಧಿಸಿಲ್ಲ.

# ಶ್ರೀಮತಿ ಚನ್ನಮ್ಮನವರಿಗೆ ಹಾಲು-ತುಪ್ಪ ಸಮರ್ಪಣೆ



• ಪ್ರಜೋದಯ ವರದಿ

**ಹೊಳೆನರಸೀಪುರ:** ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ದೇವೇಗೌಡ ಅವರಿಗೆ ಬುಧವಾರ ದೇವೇಗೌಡರು ಹಾಗು ಕುಟುಂಬಸ್ಥರು ಮೂರನೇ ದಿನದ ಹಾಲು ತುಪ್ಪ ಕಾರ್ಯ ನೆರವೇರಿಸಿದರು.

ಬೆಳಿಗ್ಗೆ 9 ಗಂಟೆಗೆ ಸಮಾಧಿ ಸ್ಥಳಕ್ಕೆ ಆಗಮಿಸಿದ ಗೌಡರ ಕುಟುಂಬಸ್ಥರು ಆರಂಭದ ಪೂಜೆಯಲ್ಲಿ ಭಾಗಿಯಾದರು. ನಂತರ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಅರಿಶಿನ, ಕುಂಕುಮ ಅರ್ಪಿಸಿ ಹಾಲು ತುಪ್ಪ ಬಿಟ್ಟರು. ಧೂಪ ಸಮರ್ಪಣೆ ಬಳಿಕ ಸಮಾಧಿ ಪ್ರದಕ್ಷಿಣೆ ಹಾಕಿದರು. ಬಳಿಕ ಕುಟುಂಬದ ಎಲ್ಲಾ ಸದಸ್ಯರು, ಬಂಧು ಮಿತ್ರರು, ಜನಪ್ರತಿನಿಧಿಗಳು ಕಾರ್ಯದಲ್ಲಿ ಭಾಗಿಯಾದರು. ಬಳಿಕ ಮತ್ತೊಮ್ಮೆ ಹಾಲು ತುಪ್ಪ ಬಿಟ್ಟ ಬಳಿಕ ಪೂಜಾ ಕೈಂಕರ್ಯ ಸಮಾಪ್ತಿಗೊಳಿಸಲಾಯಿತು. ವಿಷ್ಣು ಸಹಸ್ರನಾಮ ಪಠಣ ನೆರವೇರಿತು.

ಹೆಚ್.ಡಿ.ದೇವೇಗೌಡ ಹಾಗು ಶ್ರೀಮತಿ ಚನ್ನಮ್ಮ ಅವರ ಪುತ್ರರಾದ ಹೆಚ್.ಡಿ.ಬಾಲಕೃಷ್ಣ, ರಮೇಶ್, ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ, ಸೊಸೆಯಂದಿರಾದ ಭವಾನಿ, ಅನಿತಾ ಕುಮಾರಸ್ವಾಮಿ, ಪುತ್ರಿಯರಾದ ಅನುಸೂಯ, ಶೈಲಜಾ, ಶಾಸಕರಾದ ಎ.ಮಂಜು, ಸಿ.ಎನ್.ಬಾಲಕೃಷ್ಣ, ಹೆಚ್.ಪಿ. ಸ್ವರೂಪ್, ರಮೇಶ್‌ಬಾಬು, ಎಸ್.ಎಲ್.ಭೋಜೇಗೌಡ, ಸೂರಜ್ ರೇವಣ್ಣ, ಮಾಜಿ ಶಾಸಕ ಎ.ಟಿ. ರಾಮಸ್ವಾಮಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿ ಅನೇಕ ಜನಪ್ರತಿನಿಧಿಗಳು ಮಾತ್ರವಲ್ಲದೆ ದಕ್ಷಿಣ ಆಫ್ರಿಕಾದಿಂದ ಆಗಮಿಸಿದ್ದ ಗೌಡರ ಅಭಿಮಾನಿಗಳು ಪಾಲ್ಗೊಂಡರು.

» ನಾಲ್ಕನೇ ಪುಟದಲ್ಲಿ

# ಕಾರೆಕೆರೆ ಕೃಷಿ ಮಹಾವಿದ್ಯಾಲಯ ವಿದ್ಯಾರ್ಥಿಗಳಿಂದ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ರಾಜ್ಯದಲ್ಲಿ ಕೃಷಿ ಶಿಕ್ಷಣ ಹಾಗು ಉದ್ಯೋಗ ವಿಚಾರದಲ್ಲಿ ಸರ್ಕಾರ ಸಕಾರಾತ್ಮಕ ನಿರ್ಧಾರಗಳನ್ನು ಕೈಗೊಳ್ಳದೆ ನಿರ್ಲಕ್ಷಿಸುತ್ತಿದೆ ಎಂದು ಆರೋಪಿಸಿ ತಾಲ್ಲೂಕಿನ ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಎದುರು ಕೃಷಿ ವಿದ್ಯಾರ್ಥಿಗಳು ಅನಿರ್ದಿಷ್ಟಾವಧಿ ಪ್ರತಿಭಟನೆ ಪ್ರಾರಂಭಿಸಿದ್ದಾರೆ.

ವಿದ್ಯಾರ್ಥಿಗಳಾದ ನಿರೀಕ್ಷಾ ಮತ್ತು ಮೋಹನ್ ಅವರು ಮಾತನಾಡಿ, ರಾಜ್ಯದ ಕೃಷಿ ಶಿಕ್ಷಣ ಹಾಗು ಕೃಷಿ ಪದವೀಧರರ ಭವಿಷ್ಯವನ್ನು ಸುರಕ್ಷಿತಗೊಳಿಸುವ ಉದ್ದೇಶದಿಂದ ಹೋರಾಟ ಆರಂಭಿಸಲಾಗಿದೆ. ಸರ್ಕಾರದ ನಿರ್ಲಕ್ಷ್ಯದಿಂದ ಸಾವಿರಾರು ಪದವೀಧರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರತಿ ವರ್ಷ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ನೇಮಕಾತಿಯನ್ನು ಕಡ್ಡಾಯವಾಗಿ ನಡೆಸಬೇಕು. ರಾಯಿಟೆಕ್ ಕಾಲೇಜುಗಳನ್ನು ರದ್ದುಪಡಿಸಬೇಕು, ಬಿ.ಇ. ಜೈವಿಕ ತಂತ್ರಜ್ಞಾನ ಕೋರ್ಸ್‌ಗೆ ಅವಕಾಶ ನೀಡಬಾರದು, ಕೃಷಿ ವಿದ್ಯಾರ್ಥಿಗಳಿಗೆ ಕ್ರೀಡಾ ಕೋಟಾ ಅನ್ವಯವಾಗುವ ಕಾನೂನು ರೂಪಿಸಬೇಕು, ಖಾಸಗಿ ಕೃಷಿ ಕಾಲೇಜುಗಳಿಗೆ ಅನುಮತಿ ನೀಡಬಾರದೆಂದು ಒತ್ತಾಯಿಸಿದರು.



ಶಿಕ್ಷಣವು ವ್ಯವಹಾರವಲ್ಲ, ಅದು ಪ್ರತಿಯೊಬ್ಬರ ಹಕ್ಕು. ಸರ್ಕಾರಿ ಕಾಲೇಜುಗಳಲ್ಲಿ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು. ನ್ಯಾಯ ಸಮ್ಮತ ಬೇಡಿಕೆಗಳನ್ನು ಸರ್ಕಾರ ತಕ್ಷಣವೇ ಈಡೇರಿಸಬೇಕು. ಇಲ್ಲವಾದರೆ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು. ಕೃಷಿ ವಿದ್ಯಾರ್ಥಿಗಳಾದ ವರ್ಷ, ರೋಹಿತ್, ಗಗನಾ, ವಿನಿತಾ, ಉಜ್ವಲ್, ಅರುಣ್ ಕುಮಾರ್, ಚರಣ್ ಮತ್ತಿತರರಿದ್ದರು.

# ವಿಶ್ವಕ್ಕೆ ಮಾದರಿ ಧಾರ್ಮಿಕ ಸ್ಥಳವಾಗಿ ನಿರ್ಮಾಣಕ್ಕೆ ಒತ್ತು

## ಚನ್ನಮ್ಮ ಸಮಾಧಿ ಸ್ಥಳ ಅಭಿವೃದ್ಧಿ ಕುರಿತು ಹೆಚ್.ಡಿ.ಕುಮಾರಸ್ವಾಮಿ ಮಾಹಿತಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ವಿಶ್ವಕ್ಕೆ ಮಾದರಿಯಾಗುವ ರೀತಿಯಲ್ಲಿ ಶ್ರೀಮತಿ ಚನ್ನಮ್ಮ ಅವರ ಸಮಾಧಿ ಸ್ಥಳವನ್ನು ಮುಂದಿನ ದಿನಗಳಲ್ಲಿ ಅಭಿವೃದ್ಧಿಪಡಿಸಲಾಗುವುದೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.

ತಾಲ್ಲೂಕಿನ ಮಾವಿನಕೆರೆ ಬೆಟ್ಟದ ತಪ್ಪಲಿನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಸ್ಥಳ ಚಿರಸ್ಥಾಯಿಯಾಗಿ ಇರಬೇಕೆಂಬುದು ನಮ್ಮ ಕುಟುಂಬದ ಬಯಕೆ. ಈಗಾಗಲೇ ಈ ಕುರಿತು ಮಾತುಕತೆ ನಡೆಸಿದ್ದೇವೆ. ವ್ಯಾಪ್ತಿಯ ಭೂಮಾಲೀಕರ ಜೊತೆ ನಾನು ಮಾತುಕತೆ ನಡೆಸಿದ್ದು, ಎಲ್ಲರೂ ಒಳ್ಳೆಯ ಭಾವನೆಯಿಂದ ಭೂಮಿ ನೀಡಲು ಸಮ್ಮತಿ ಸೂಚಿಸಬೇಕು. ಭೂಮಿ ನೀಡುವ ರೈತರಿಗೆ ಈ ಜಾಗದಲ್ಲಿ ಬದುಕಲು



ಅವಕಾಶ ಮಾಡಿಕೊಡಲಾಗುವುದು. ತಂದೆ-ತಾಯಿ ಹೆಸರಿನಲ್ಲಿ ನಾಡಿಗೆ ಸಮರ್ಪಣೆ ಮಾಡುವ ಪೂಜ್ಯನೀಯ ಜಾಗ ಇದಾಗಲಿದೆ ಎಂದರು.

ಧಾರ್ಮಿಕ ಕ್ಷೇತ್ರವಾಗಿ ಮಾತ್ರವಲ್ಲದೆ ಸಾಮಾಜಿಕವಾಗಿ ಸಂಕಷ್ಟ ಎದುರಿಸುವವರು ಈ ಸ್ಥಳದಲ್ಲಿ ನೆಮ್ಮದಿಯ ಜೀವನ ಕಟ್ಟಿಕೊಳ್ಳಲು ವಾತಾವರಣ ನಿರ್ಮಿಸಲಾಗುವುದು. ನಮ್ಮ ಹಳೆಯ ಸಂಸ್ಕೃತಿಯನ್ನು ಉಳಿಸ ಬೇಕೆಂಬ ನಿಟ್ಟಿನಲ್ಲಿ ಚಿಂತನೆ ನಡೆದಿದೆ ಎಂದು ಹೇಳಿದರು.

ಕಳೆದ ಒಂದೂವರೆ ವರ್ಷದಿಂದ ತಾಯಿ ಚನ್ನಮ್ಮನವರಿಗೆ ಆರೋಗ್ಯ ಸಮಸ್ಯೆಗಳು ಹೆಚ್ಚಾಗಿದ್ದವು. ರಾಜಕೀಯದಲ್ಲಿ ನಮ್ಮಿಂದಲೂ ತಪ್ಪುಗಳಾಗಿವೆ. ನಮ್ಮ ಕುಟುಂಬವನ್ನು ರಾಜ್ಯದ ಜನರ ಹೃದಯದಿಂದ ಅಳಿಸಿ ಹಾಕುವ ಪ್ರಯತ್ನಗಳು ನಡೆದಿವೆ. ಆ್ಯಸಿಡ್ ದಾಳಿ ಹಾಗು ವಯಸ್ಸಾಗಿರುವ ತಂದೆ-ತಾಯಿ ಅನುಭವಿಸಿರುವ ಮಾನಸಿಕ ಯಾತನೆಯನ್ನು ಮುಂದೆ ಯಾರಾದರೂ ಪುಸ್ತಕ ರೂಪದಲ್ಲಿ ದಾಖಲಿಸಬಹುದೆಂದು ಹೇಳಿದರು.

» ನಾಲ್ಕನೇ ಪುಟದಲ್ಲಿ

> **ಪ್ರಜ್ವಲ್ ಬರುವಿಕೆಗೆ ಕಾದಿದ್ದ ಚನ್ನಮ್ಮ**
>
> ತಾಯಿ ಚನ್ನಮ್ಮ ಅವರು ಮೊಮ್ಮಗ, ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಬರುವಿಕೆಗಾಗಿ ಕಾಯುತ್ತಿದ್ದರೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.
>
> ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಅವರನ್ನು ನಾನು ಆಗಾಗ ಭೇಟಿಯಾಗುತ್ತಿದ್ದೆ. ಒಳ್ಳೆಯ ಕೆಲಸ ಮಾಡು, ಜನರಿಗೆ ಒಳಿತು ಮಾಡು ಎನ್ನುತ್ತಿದ್ದರು. ಮತ್ತೆ ಯಾವಾಗ ಅವನನ್ನು ಕರೆದುಕೊಂಡು ಬರುತ್ತೀಯಾ ಎಂದು ಎರಡ್ಮೂರು ಸಲ ಕೇಳಿದ್ದರು. ಆ ನೋವು ನನಗೆ ಈಗಲೂ ಕಾಡುತ್ತಿದೆ. ಕೆಲವು ಕಹಿ ಘಟನೆಗಳು ಸಹ ಅವರು ಮಾನಸಿಕವಾಗಿ ಕುಗ್ಗಲು ಕಾರಣವಾಯಿತು. ಇಲ್ಲದಿದ್ದರೆ ನಮ್ಮ ತಾಯಿ ಇನ್ನೂ ಎರಡ್ಮೂರು ವರ್ಷ ಬದುಕಿರುತ್ತಿದ್ದರು ಎಂದರು.

> "ನಮ್ಮ ತಂದೆ-ತಾಯಿ ಜೀವನದಲ್ಲಿ ಸಂತೋಷಕ್ಕಿಂತ ನೋವನ್ನೇ ಹೆಚ್ಚು ಅನುಭವಿಸಿದ್ದಾರೆ. ತಂದೆಯನ್ನು ನಮ್ಮ ತಾಯಿ ಮಗುವಿನಂತೆ ಜೋಪಾನ ಮಾಡಿದ್ದಾರೆ. ದೈವಭಕ್ತರಾಗಿದ್ದ ಅವರ ಇಷ್ಟಾರ್ಥದಂತೆ ಮುಂದಿನ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುವುದು.
>
> -ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

# ಅಂತರಾಷ್ಟ್ರೀಯ ಮಟ್ಟದ ಕಾಫಿ ಉತ್ಪಾದನೆಗೆ ಆದ್ಯತೆ

- ಬೆಳೆಗಾರರಿಗೆ ಕಾಫಿ ಮಂಡಳಿಯ ಜಂಟಿ ನಿರ್ದೇಶಕ ನಂದಗೋಪಾಲ್ ಸಲಹೆ

• ಪ್ರಜೋದಯ ವರದಿ

**ಹಾಸನ:** ಕಾಫಿ ಬೆಳೆಗಾರರು ರಾಸಾಯನಿಕ ಅತಿಯಾದ ಬಳಕೆಯನ್ನು ಕಡಿಮೆ ಮಾಡಿ, ಸಾವಯವ ಗೊಬ್ಬರ ಹಾಗು ಪರಿಸರ ಸ್ನೇಹಿ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಅಂತರಾಷ್ಟ್ರೀಯ ಮಟ್ಟದ ಗುಣಮಟ್ಟದ ಕಾಫಿ ಉತ್ಪಾದನೆಗೆ ಆದ್ಯತೆ ನೀಡಬೇಕೆಂದು ಕಾಫಿ ಮಂಡಳಿಯ ಜಂಟಿ ನಿರ್ದೇಶಕ ನಂದಗೋಪಾಲ್ ಅವರು ತಿಳಿಸಿದರು.

ಜಿಲ್ಲಾ ಪ್ಲಾಂಟರ್ಸ್ ಸಂಘದಿಂದ ಕಾಫಿ ಮಂಡಳಿಯ ಸೆಂಟರ್ ಆಫ್ ಎಕ್ಸಲೆನ್ಸ್ ಪ್ರಯೋಗಾಲಯ ಹಾಗು ಎನ್.ಕೆ.ಜಿ. ಕಾಫಿ ಕ್ಯೂರಿಂಗ್ ವರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಸಾಯನಿಕ ಗೊಬ್ಬರಗಳ ಜೊತೆಗೆ ಸಾವಯವ ಗೊಬ್ಬರ ಹಾಗು ಜೈವಿಕ ಔಷಧಿಗಳ ಬಳಕೆಯಿಂದ ಮಣ್ಣಿನ ಫಲವತ್ತತೆ ಹೆಚ್ಚುವುದರ ಜೊತೆಗೆ ಗುಣಮಟ್ಟದ ಕಾಫಿ ಉತ್ಪಾದನೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.



ಕಾಫಿ ಮಂಡಳಿಯ ಉಪ ನಿರ್ದೇಶಕಿ ಡಾ.ಜ್ಯೋತಿ ಅವರು ಮಾತನಾಡಿ, ಬೆಳೆಗಾರರಿಗೆ ಕಾಫಿ ಮಂಡಳಿಯಿಂದ ದೊರೆಯುವ ವಿವಿಧ ಸೇವೆಗಳು, ಸೌಲಭ್ಯಗಳು ಹಾಗು ಯೋಜನೆಗಳ ಕುರಿತು ಮಾಹಿತಿ ನೀಡಿದರು. ಕೋರ ಮಂಡಲ್ ಫರ್ಟಿಲೈಸರ್ಸ್ ಕಂಪನಿಯ ಜನರಲ್ ಮ್ಯಾನೇಜರ್ ಬಸವರಾಜ್ ಹಾಗು ಪ್ರತಿನಿಧಿ ಕಿಶೋರ್ ಕುಮಾರ್ ಅವರು ಕಂಪನಿಯ ವಿವಿಧ ಕೃಷಿ ಉತ್ಪನ್ನಗಳ ಬಳಕೆ ಮತ್ತು ಅವುಗಳ ಪ್ರಯೋಜನಗಳ ಕುರಿತು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

» ನಾಲ್ಕನೇ ಪುಟದಲ್ಲಿ

# ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಹೆಚ್ಚಳ

**ಬೆಂಗಳೂರು:** ಮಳೆ ಕೊರತೆಯಿಂದಾಗಿ ರಾಜ್ಯದಲ್ಲಿ ಜಲ ವಿದ್ಯುತ್ ಉತ್ಪಾದನೆ ಕುಂಠಿತವಾಗಿರುವ ಕಾರಣ ಶಾಖೋತ್ಪನ್ನ ಕೇಂದ್ರಗಳಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲಾಗಿದೆ. ಈ ತಿಂಗಳಲ್ಲಿ ಪ್ರತಿನಿತ್ಯ ಸರಾಸರಿ 84.34 ದಶಲಕ್ಷ ಯೂನಿಟ್ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಜಲಾಶಗಳಲ್ಲಿ ನೀರಿನ ಮಟ್ಟ ಕಡಿಮೆ ಇರುವುದರಿಂದ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳನ್ನು ಸುಸ್ಥಿತಿಯಲ್ಲಿಟ್ಟು ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಅಲ್ಲದೆ ಅದನ್ನು ಪ್ರತಿನಿತ್ಯ 100 ದಶಲಕ್ಷ ಯೂನಿಟ್‌ಗೆ ಹೆಚ್ಚಿಸಲು ಕ್ರಮ

# ಭತ್ತದ ಸಸಿ ಮಡಿ ತುಳಿದು ಹಾಕಿದ ಕಾಡಾನೆಗಳ ಹಿಂಡು

• ಪ್ರಜೋದಯ ವರದಿ

**ಸಕಲೇಶಪುರ:** ಕಾಡಾನೆಗಳ ಹಿಂಡು ಭತ್ತದ ಸಸಿ ಮಡಿಯನ್ನು ತುಳಿದು ಹಾಕಿರುವ ಘಟನೆ ತಾಲ್ಲೂಕಿನ ಹೆತ್ತೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಹೆಚ್.ಆರ್.ಹರೀಶ್ ಎಂಬುವವರ ಜಮೀನಿನಲ್ಲಿ ಭತ್ತದ ಸಸಿ ಮಡಿಗಳನ್ನು ಕಾಡಾನೆಗಳು ತುಳಿದು ಹಾಕಿದ್ದು, ಅಪಾರ ಪ್ರಮಾಣದ ನಷ್ಟ ಉಂಟಾಗಿದೆ. ಮುಂಗಾರು ಆರಂಭವಾದ ಬೆನ್ನಲ್ಲೇ ಕೃಷಿ ಕಾರ್ಯ ಕೈಗೊಂಡಿದ್ದ ರೈತನಿಗೆ ಈ ಘಟನೆ ಭಾರೀ ಹೊಡೆತ ನೀಡಿದೆ.

ಕಾಡಾನೆಗಳ ಹಿಂಡು ಹಾವಳಿ ನಡೆಸಿದ್ದರೂ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ



ಪರಿಶೀಲನೆ ನಡೆಸಿಲ್ಲವೆಂದು ಗ್ರಾಮಸ್ಥರು ಆರೋಪಿಸಿದ್ದಾರೆ. ತಕ್ಷಣ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಬೆಳೆ ಹಾನಿಯ ಮೌಲ್ಯಮಾಪನ ನಡೆಸಿ, ಸರ್ಕಾರದಿಂದ ಸೂಕ್ತ ಪರಿಹಾರವನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಹೆತ್ತೂರು ಹಾಗು ಸುತ್ತಮುತ್ತಲಿನ ಗ್ರಾಮಗಳಲ್ಲಿ ನಿರಂತರವಾಗಿ ಕಾಡಾನೆಗಳ ಸಂಚಾರ ಹೆಚ್ಚುತ್ತಿದ್ದು, ರೈತರ ಜೀವ ಮತ್ತು ಆಸ್ತಿಗೆ ಅಪಾಯ ಎದುರಾಗಿದೆ. ಆದ್ದರಿಂದ ಅರಣ್ಯ ಇಲಾಖೆ ಶಾಶ್ವತ ಪರಿಹಾರ ಕ್ರಮಗಳನ್ನು ಕೈಗೊಂಡು ಕಾಡಾನೆಗಳ ಹಾವಳಿಗೆ ಕಡಿವಾಣ ಹಾಕಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಕಾವೇರಿ ಗ್ರಾಮೀಣ ಬ್ಯಾಂಕ್ ವ್ಯವಸ್ಥಾಪಕ, ಸಿಬ್ಬಂದಿ ಅಮಾನತು

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಕಾವೇರಿ ಗ್ರಾಮೀಣ ಬ್ಯಾಂಕ್ ಶಾಖೆಯಲ್ಲಿ ಕೆಲಸದ ಸಮಯ ಮುಗಿದ ಬಳಿಕ ಸಿಬ್ಬಂದಿಯನ್ನು ಹೊರಹೋಗಲು ಬಿಡದೆ ಬ್ಯಾಂಕ್‌ನ ಮುಖ್ಯ ಗೇಟ್‌ಗೆ ಬೀಗ ಹಾಕಿ ತಡೆದಿರುವ ಆರೋಪ ಕೇಳಿ ಬಂದಿದ್ದು, ಘಟನೆಗೆ ಸಂಬಂಧಿಸಿದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಬೆನ್ನಲ್ಲೇ ಇಬ್ಬರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಬ್ಯಾಂಕ್ ವ್ಯವಸ್ಥಾಪಕ ಸುಕೇಶ್ ಮತ್ತು ಸಿಬ್ಬಂದಿ ಸೂರ್ಯಪ್ರಕಾಶ್ ಅವರನ್ನು ಅಮಾನತು ಮಾಡಲಾಗಿದೆ. ಸಂಜೆ 5 ಗಂಟೆಗೆ ತಮ್ಮ ಕರ್ತವ್ಯ ಪೂರ್ಣಗೊಳಿಸಿದ್ದ ಸಿಬ್ಬಂದಿಯೊಬ್ಬರು ವೈಯಕ್ತಿಕ ಕೆಲಸದ ನಿಮಿತ್ತ ಮನೆಗೆ ತೆರಳಲು ಶಾಖಾ ವ್ಯವಸ್ಥಾಪಕರಲ್ಲಿ ಅನುಮತಿ ಕೋರಿದ್ದರು. ಆದರೆ, ಅನುಮತಿ ನಿರಾಕರಿಸಿದ ವ್ಯವಸ್ಥಾಪಕರು ಬ್ಯಾಂಕ್‌ನ ಮುಖ್ಯ ಗೇಟ್‌ಗೆ ಬೀಗ ಹಾಕಿ ಸಿಬ್ಬಂದಿ ಹೊರ ಹೋಗದಂತೆ ತಡೆದಿದ್ದರು ಎನ್ನಲಾಗಿದೆ.

ಈ ಸಂದರ್ಭದಲ್ಲಿ ನಡೆದ ಘಟನೆಯನ್ನು ಸಿಬ್ಬಂದಿಯೇ ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದು,



ಗೇಟ್‌ಗೆ ಬೀಗ ಹಾಕಿ ಸಿಬ್ಬಂದಿಯನ್ನು ತಡೆದು ನಿಲ್ಲಿಸಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ವಿಡಿಯೋ ವೈರಲ್ ಆದ ನಂತರ ಬ್ಯಾಂಕ್ ಸಿಬ್ಬಂದಿ ಹಾಗು ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಕೆಲಸ ಮುಗಿದ ನಂತರ ಸಿಬ್ಬಂದಿಯನ್ನು ಬಲವಂತವಾಗಿ ಬ್ಯಾಂಕ್‌ನಲ್ಲೇ ತಡೆದು ನಿಲ್ಲಿಸುವುದು ಹಾಗು ಕಿರುಕುಳ ನೀಡುವುದು ಕಾರ್ಮಿಕರ ಹಕ್ಕುಗಳ ಉಲ್ಲಂಘನೆಯಾಗಿದ್ದು, ಈ ಘಟನೆಯ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದರು.

ಘಟನೆಯ ಗಂಭೀರತೆಯನ್ನು ಪರಿಗಣಿಸಿರುವ ಬ್ಯಾಂಕ್ ಆಡಳಿತವು ಪ್ರಾಥಮಿಕ ಕ್ರಮವಾಗಿ ಇಬ್ಬರನ್ನು ಸೇವೆಯಿಂದ ಅಮಾನತುಗೊಳಿಸಿದ್ದು, ಪ್ರಕರಣದ ಕುರಿತು ಇಲಾಖಾ ಮಟ್ಟದ ತನಿಖೆ ಮುಂದುವರಿದಿದೆ ಎಂದು ಮೂಲಗಳು ತಿಳಿಸಿವೆ. ತನಿಖೆಯ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.

## ಅಕಾಲಿಕ ಫಸಲು, ಕೊಳೆರೋಗ | ಗ್ರೀನ್‌ಬಗ್ ಹಾವಳಿಯಿಂದ ಬೆಳೆಗಾರರಿಗೆ ಸಂಕಷ್ಟ

# ಹವಾಮಾನ ವೈಪರೀತ್ಯದ ಹೊಡೆತಕ್ಕೆ ಕಾಫಿ ಬೆಳೆ ತತ್ತರ

**ಕೆ.ಪಿ.ಸಾಗರ್ ರಾಜು**

• ಪ್ರಜೋದಯ ವರದಿ

**ಹಾಸನ:** ಮಲೆನಾಡಿನ ಕಾಫಿ ಬೆಳೆಗಾರರು ಈ ಬಾರಿ ಒಂದೇ ಸಮಯದಲ್ಲಿ ಹಲವು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಕೊಳೆ ರೋಗ, ಮಳೆಗಾಲದಲ್ಲೇ ಅರೇಬಿಕಾ ಕಾಫಿ ಅಕಾಲಿಕವಾಗಿ ಹಣ್ಣಾಗಿರುವುದು ಹಾಗು ಗ್ರೀನ್‌ಬಗ್ (ಇರುವೆ) ಹಾವಳಿ ಹೆಚ್ಚುತ್ತಿರುವುದು ಬೆಳೆಗಾರರನ್ನು ಆತಂಕಕ್ಕೆ ದೂಡಿದೆ.

ಹವಾಮಾನ ವೈಪರೀತ್ಯದಿಂದ ವರ್ಷದಿಂದ ವರ್ಷಕ್ಕೆ ಹೊಸ ಹೊಸ ಸಮಸ್ಯೆಗಳು ಎದುರಾಗುತ್ತಿದ್ದು, ಸರ್ಕಾರ ವಿಶೇಷ ಪರಿಹಾರ ಹಾಗು ವೈಜ್ಞಾನಿಕ ಮಾರ್ಗದರ್ಶನ ನೀಡಬೇಕೆಂದು ಬೆಳೆಗಾರರು ಆಗ್ರಹಿಸಿದ್ದಾರೆ.

ಮಲೆನಾಡಿನಲ್ಲಿ ಕಳೆದ ಕೆಲವು ವರ್ಷಗಳಿಂದ ಮಳೆಯ ವೈಪರೀತ್ಯವೇ ಕಾಫಿ ಬೆಳೆಗೆ ದೊಡ್ಡ ಸವಾಲಾಗಿದೆ. ಒಂದು ವರ್ಷ ಅತಿವೃಷ್ಟಿಯಿಂದ ಕೊಳೆ ರೋಗ ಉಲ್ಬಣಿಸಿದರೆ, ಮತ್ತೊಂದು ವರ್ಷ ಮಳೆ ಕೊರತೆಯಿಂದ ಕೀಟರೋಗಗಳ ಹಾವಳಿ ಹೆಚ್ಚುತ್ತಿದೆ. ಈ ಬಾರಿ ಮಾರ್ಚ್‌ನಲ್ಲಿ ಸುರಿಯಬೇಕಿದ್ದ ಹೂವಿನ ಮಳೆ ಜನವರಿಯಲ್ಲೇ ಸುರಿದ ಪರಿಣಾಮ ಅರೇಬಿಕಾ ಕಾಫಿ ಜುಲೈ ತಿಂಗಳಲ್ಲೇ ಹಣ್ಣಾಗಿದೆ. ಸಾಮಾನ್ಯವಾಗಿ ಡಿಸೆಂಬರ್ ಅಥವಾ ಜನವರಿಯಲ್ಲಿ ಕಟಾವಿಗೆ ಬರುವ ಫಸಲು ಮಳೆಗಾಲದಲ್ಲೇ ಬಂದಿರುವುದು ತೀವ್ರ ಸಂಕಷ್ಟ ತಂದೊಡ್ಡಿದೆ.



ಬಿಟ್ಟು ಬಿಟ್ಟು ಸುರಿಯುತ್ತಿರುವ ಮಳೆಯಿಂದ ಕಾಫಿ ಹಣ್ಣುಗಳನ್ನು ಕೊಯ್ಯುವುದು ಕಷ್ಟವಾಗಿದ್ದು, ಕೊಯ್ದರೂ ಅವುಗಳನ್ನು ಒಣಗಿಸಲು ಸಾಧ್ಯವಾಗುತ್ತಿಲ್ಲ. ಗಾಳಿ-ಮಳೆಗೆ ಸಾಕಷ್ಟು ಹಣ್ಣು ನೆಲಕ್ಕೆ ಉದುರಿ ಹಾಳಾಗುತ್ತಿದೆ. ಈ ಬಾರಿ ಕಾಫಿಗೆ ಉತ್ತಮ ಮಾರುಕಟ್ಟೆ ಬೆಲೆ ದೊರೆಯುತ್ತಿದ್ದರೂ, ಅಕಾಲಿಕ ಕಟಾವು ಹಾಗು ಮಳೆಗಾಲದ ಅಡಚಣೆಯಿಂದ ಬೆಳೆಗಾರರು ನಷ್ಟಕ್ಕೆ ತುತ್ತಾಗುವಂತಾಗಿದೆ.

**ಗ್ರೀನ್‌ಬಗ್ ಹಾವಳಿ ಹೆಚ್ಚಳ**

ಕೊಳೆ ರೋಗದ ನಡುವೆಯೇ ಗ್ರೀನ್‌ಬಗ್ ಹಾವಳಿಯೂ ಕಾಫಿ ತೋಟಗಳಲ್ಲಿ ತೀವ್ರಗೊಂಡಿದೆ. ಹಿಂದಿನ ವರ್ಷಗಳಲ್ಲಿ ಅಲ್ಲಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದ ಈ ಸಮಸ್ಯೆ, ಈ ಬಾರಿ ಹಲವು ತೋಟಗಳಿಗೆ ವ್ಯಾಪಿಸುತ್ತಿದೆ. ಮಳೆ ಕೊರತೆಯಿಂದ ಇರುವೆಗಳ ಸಂತತಿ ವ್ಯಾಪಕವಾಗಿ ಕಾಫಿ ಗಿಡಗಳನ್ನು ಆವರಿಸಿಕೊಳ್ಳುತ್ತಿವೆ.

ಸಣ್ಣ ಇರುವೆಗಳು ಕಾಫಿ ಗಿಡದ ಎಲೆಗಳನ್ನು ಹಾನಿಗೊಳಿಸುವುದರ ಜೊತೆಗೆ ಅಂಟು ದ್ರವವನ್ನು ಹೊರ ಸೂಸುತ್ತವೆ. ಈ ದ್ರವ ಎಲೆಗಳ ಮೇಲೆ ಗಟ್ಟಿಯಾಗಿ ಅಂಟಿ ಕೊಳ್ಳುವುದರಿಂದ ಗಿಡಗಳ ಬೆಳವಣಿಗೆ ಕುಂಠಿತವಾಗುತ್ತದೆ. ಕಾಫಿ ಹೀಚುಗಳನ್ನು ತಿನ್ನುವುದರಿಂದ ಕಾಳು ಬೆಳೆಯುವ ಮುನ್ನವೇ ಉದುರಿ ಹೋಗುವ ಸಾಧ್ಯತೆ ಇದೆ. ಎಲೆಗಳ ಮೇಲೆ ದಪ್ಪವಾಗಿ ಅಂಟು ದ್ರವ ಶೇಖರಣೆಯಾಗುವುದರಿಂದಾಗಿ ಎಲೆಗಳು ಉದುರಿ ಹೋಗಲಾರಂಭಿಸುತ್ತವೆ. ಇದು ಮುಂದುವರಿದಂತೆ ಕಾಫಿ ಗಿಡಗಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

ಕಾಫಿ ಗಿಡಗಳ ಮೇಲೆ ಇರುವೆಗಳು ಸುರಿಸುವ ಅಂಟು ದ್ರವ ಜೋರಾದ ಮಳೆ ಬಂದರೆ ಮಾತ್ರ ತೊಳೆದು ಹೋಗುತ್ತದೆ. ಆದರೆ, ಈ ಬಾರಿ ರಭಸವಾದ ಮಳೆ ಸುರಿಯದೆ ಇರುವುದರಿಂದಾಗಿ ಕಾಫಿ ಗಿಡಗಳ ಮೇಲೆ ಇರುವೆಗಳು ಸುರಿಸಿರುವ ಅಂಟು ದ್ರವ ಹಾಗೆಯೇ ಉಳಿದುಕೊಂಡಿದೆ.

> **ವಿಶೇಷ ನೆರವಿಗೆ ಆಗ್ರಹ**
>
> ಹವಾಮಾನ ವೈಪರೀತ್ಯದ ಪರಿಣಾಮ ಕಾಫಿ ಕೃಷಿಯ ಸ್ವರೂಪವೇ ಬದಲಾಗುತ್ತಿದೆ. ಅಕಾಲಿಕ ಹೂಬಿಡುವಿಕೆ, ಅಸಮರ್ಪಕ ಮಳೆಯ ಹಂಚಿಕೆ, ಕೊಳೆರೋಗ ಹಾಗು ಕೀಟ ರೋಗಗಳ ಹೆಚ್ಚಳದಿಂದ ಉತ್ಪಾದನೆ ಮತ್ತು ಗುಣಮಟ್ಟ ಎರಡಕ್ಕೂ ಹೊಡೆತ ಬೀಳುತ್ತಿದೆ. ಈ ಹಿನ್ನಲೆ ಸರ್ಕಾರ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸುವುದರ ಜೊತೆಗೆ ಕಾಫಿ ಮಂಡಳಿ ಹಾಗು ಕೃಷಿ ವಿಜ್ಞಾನಿಗಳ ಮೂಲಕ ವೈಜ್ಞಾನಿಕ ಸಲಹೆ, ರೋಗ ನಿಯಂತ್ರಣ ಕ್ರಮಗಳು ಮತ್ತು ಪರಿಸ್ಥಿತಿಗೆ ಹೊಂದುವ ಕೃಷಿ ತಂತ್ರಜ್ಞಾನವನ್ನು ತಕ್ಷಣ ಒದಗಿಸಬೇಕೆಂದು ಬೆಳೆಗಾರರು ಒತ್ತಾಯಿಸಿದ್ದಾರೆ.



**ಕೀಟನಾಶಕ ಸಿಂಪಡಣೆಗೆ ದ್ವಂದ್ವ**

ಗ್ರೀನ್‌ಬಗ್ ನಿಯಂತ್ರಣಕ್ಕೆ ಕೀಟನಾಶಕ ಸಿಂಪಡಣೆ ಅನಿವಾರ್ಯವಾಗಿದೆ. ಆದರೆ, ಭಾರತದಿಂದ ಯುರೋಪ್ ಸೇರಿ ಹಲವು ದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಕಾಫಿ ರಫ್ತಾಗುತ್ತದೆ. ರಾಸಾಯನಿಕ ಅವಶೇಷಗಳಿರುವ ಕಾಫಿಯನ್ನು ಈ ರಾಷ್ಟ್ರಗಳು ಸ್ವೀಕರಿಸುವುದಿಲ್ಲ. ರಫ್ತು ಮಾಡಿದ ಬಳಿಕವೂ ಪರೀಕ್ಷೆಯಲ್ಲಿ ರಾಸಾಯನಿಕ ಅಂಶ ಪತ್ತೆಯಾದರೆ ಸರಕು ವಾಪಾಸ್ ಕಳುಹಿಸಲಾಗುತ್ತದೆ. ಹೀಗಾಗಿ ಬೆಳೆ ಉಳಿಸಿಕೊಳ್ಳಲು ಕೀಟನಾಶಕ ಸಿಂಪಡಿಸಿದರೆ ರಫ್ತು ಮಾರುಕಟ್ಟೆ ಕಳೆದುಕೊಳ್ಳುವ ಅಪಾಯ, ಸಿಂಪಡಿಸದಿದ್ದರೆ ಗ್ರೀನ್‌ಬಗ್‌ನಿಂದ ಬೆಳೆ ನಷ್ಟವಾಗುವ ಭೀತಿ ಎದುರಾಗಿದೆ. ಪರಿಣಾಮ ಬೆಳೆಗಾರರು ಎರಡೂ ಕಡೆ ಸಂಕಷ್ಟಕ್ಕೆ ಸಿಲುಕಿದ್ದಾರೆ.

# ಸರ್ ಗ್ಯಾರಿ ಸೋಬರ್ಸ್ ಯುಗ ಅಂತ್ಯ

## ವಿಶ್ವ ಕ್ರಿಕೆಟ್‌ನ ಸರ್ವಶ್ರೇಷ್ಠ ಆಲ್ ರೌಂಡರ್

ಕ್ರಿಕೆಟ್ ಇತಿಹಾಸದಲ್ಲಿ ಶ್ರೇಷ್ಠ ಆಲ್ ರೌಂಡರ್ ಯಾರು? ಎಂಬ ಪ್ರಶ್ನೆಗೆ, ವಿವಿಧ ಕಾಲಘಟ್ಟಗಳಲ್ಲಿ ಅನೇಕ ದಿಗ್ಗಜರ ಹೆಸರುಗಳು ಕೇಳಿಬರುತ್ತವೆ. ಕಪಿಲ್ ದೇವ್, ಇಮ್ರಾನ್ ಖಾನ್, ಇಯಾನ್ ಬೋಥಮ್, ರಿಚರ್ಡ್ ಹ್ಯಾಡ್ಲಿ, ಜಾಕ್ ಕಾಲಿಸ್, ಬೆನ್ ಸ್ಟೋಕ್ಸ್ ಹೀಗೆ ಹಲವರ ಹೆಸರುಗಳು ಚರ್ಚೆಯಾಗಬಹುದು. ಆದರೆ ಇವರೆಲ್ಲರಿಗಿಂತ ಮೇಲೊಂದು ಹೆಸರು ಇದ್ದು, ಅದುವೇ ಸರ್ ಗರ್‌ಫೀಲ್ಡ್ ಗ್ಯಾರಿ ಸೋಬರ್ಸ್. ಅವರು ಕೇವಲ ಒಬ್ಬ ಕ್ರಿಕೆಟಿಗರಾಗಿರಲಿಲ್ಲ, ಕ್ರಿಕೆಟ್ ಎಂಬ ಆಟವೇ ರೂಪಿಸಿದ ಅತ್ಯಂತ ಸಂಪೂರ್ಣ ಆಟಗಾರ. ಒಬ್ಬ ಬ್ಯಾಟ್ಸ್ ಮನ್, ಮೂರು ರೀತಿಯ ಬೌಲರ್, ಅದ್ಭುತ ಫೀಲ್ಡರ್ ಮತ್ತು ಅತ್ಯುನ್ನತ ನಾಯಕತ್ವ ಗುಣಗಳನ್ನು ಹೊಂದಿದ್ದ ಅಪರೂಪದ ಪ್ರತಿಭೆ. 90ನೇ ಹುಟ್ಟುಹಬ್ಬವನ್ನು ಆಚರಿಸಲು ಕೇವಲ ಹತ್ತು ದಿನಗಳು ಬಾಕಿ ಇರುವಾಗಲೇ ವಿಶ್ವ ಕ್ರಿಕೆಟ್ ತನ್ನ ಮಹಾನ್ ದಂತಕಥೆಯೊಬ್ಬರಿಗೆ ಅಂತಿಮ ವಿದಾಯ ಹೇಳಿದೆ.

**ಕ್ರಿಕೆಟ್ ಲೋಕದ ನಿಜವಾದ ಸಾರ್ವಕಾಲಿಕ ಶ್ರೇಷ್ಠ ವ್ಯಕ್ತಿ**



ಯುವರಾಜ್ ಸಿಂಗ್ ಒಂದೇ ಓವರ್‌ನಲ್ಲಿ ಆರು ಸಿಕ್ಸರ್‌ಗಳನ್ನು ಸಿಡಿಸುವುದಕ್ಕೆ ಸುಮಾರು 40 ವರ್ಷಗಳ ಮುಂಚೆಯೇ....

ರವಿಶಾಸ್ತ್ರಿ ಒಂದೇ ಓವರ್‌ನ ಎಲ್ಲಾ ಎಸೆತಗಳನ್ನು ಬೌಂಡರಿ ದಾಟಿಸುವುದಕ್ಕೂ ಸುಮಾರು 17 ವರ್ಷಗಳ ಮುಂಚೆಯೇ....

ಒಂದೇ ಓವರ್‌ನಲ್ಲಿ ಆರು ಸಿಕ್ಸರ್‌ಗಳನ್ನು ಬಾರಿಸಿದ ಮೊದಲ ಪ್ರಥಮ ದರ್ಜೆ ಕ್ರಿಕೆಟಿಗ ಎಂಬ ಇತಿಹಾಸವನ್ನು ನಿರ್ಮಿಸಿದ್ದವರು ಸರ್ ಗ್ಯಾರಿ ಸೋಬರ್ಸ್. ಇದು ಕೇವಲ ದಾಖಲೆ ಅಲ್ಲ. ಅದು ಒಂದು ಯುಗದ ಆರಂಭ.

**ಎಲ್ಲವನ್ನೂ ಮಾಡಬಲ್ಲ ದೈತ್ಯ ಕ್ರಿಕೆಟ್ ಪ್ರತಿಭೆ**



ಆಲ್‌ರೌಂಡರ್ ಎಂದರೆ ಬ್ಯಾಟಿಂಗ್ ಮತ್ತು ಬೌಲಿಂಗ್ ಮಾಡುವ ಆಟಗಾರ ಎನ್ನುವುದು ಸಾಮಾನ್ಯ ಅರ್ಥ. ಆದರೆ ಗ್ಯಾರಿ ಸೋಬರ್ಸ್ ವಿಷಯದಲ್ಲಿ ಅದು ಸಾಕಾಗುವುದಿಲ್ಲ. ಅವರು....

- ★ ಎಡಗೈ ಸ್ಫೋಟಕ ಬ್ಯಾಟ್ಸ್‌ಮನ್
- ★ ಎಡಗೈ ಮಧ್ಯಮ ವೇಗದ ಬೌಲರ್
- ★ ಎಡಗೈ ಆರ್ಥೋಡಾಕ್ಸ್ ಸ್ಪಿನ್ನರ್
- ★ ಎಡಗೈ ಚೈನಾಮನ್ ಹಾಗೂ ಲೆಗ್ ಸ್ಪಿನ್ ಬೌಲರ್

**ಅದ್ಭುತ ಸ್ಲಿಪ್ ಹಾಗೂ ಔಟ್‌ಫೀಲ್ಡ್ ಫೀಲ್ಡರ್**

ಒಂದೇ ಆಟಗಾರನಲ್ಲಿ ಇಷ್ಟೆಲ್ಲ ಕೌಶಲ್ಯಗಳು ಸೇರುವುದೇ ಅಪರೂಪ. ಅದರಲ್ಲೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ವರ್ಷಗಳ ಕಾಲ ಯಶಸ್ಸು ಸಾಧಿಸಿರುವುದು ಅವರನ್ನು ಕ್ರಿಕೆಟ್‌ನ ಸಂಪೂರ್ಣ ಆಟಗಾರನನ್ನಾಗಿ ಮಾಡಿತು.

**ದುಃಖದಲ್ಲೇ ಆರಂಭವಾದ ಬದುಕು**

1936ರ ಜುಲೈ 28ರಂದು ವೆಸ್ಟ್ ಇಂಡೀಸ್‌ನ ಬಾರ್ಬಡೋಸ್‌ನ ಬ್ರಿಡ್ಜ್‌ಟೌನ್‌ನಲ್ಲಿ ಬ್ರಿಡ್ಜ್‌ಟೌನ್‌ನ ಸೇಂಟ್ ಮೈಕೆಲ್‌ನ ಬೇ ಲ್ಯಾಂಡ್‌ನ ವಾಲ್ಕಾಟ್ ಅವೆನ್ಯೂದ ಶಾಮಂಟ್ ಮತ್ತು ಥೆಲ್ಮಾ ಸೋಬರ್ಸ್ ದಂಪತಿಗಳ ಆರು ಮಕ್ಕಳ ಪೈಕಿ ಐದನೆಯವರಾಗಿದ್ದರು ಜನಿಸಿದ ಸೋಬರ್ಸ್ ಸಂಪೂರ್ಣ ಹೆಸರು ಗಾರ್ಫೀಲ್ಡ್ ಸೇಂಟ್ ಆಬ್ರನ್ ಸೋಬರ್ಸ್. ಅವರಿಗೆ ಕೇವಲ ಐದು ವಯಸ್ಸಿರುವಾಗಲೇ, ಅವರ ತಂದೆ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಮೃತಪಟ್ಟರು. ಹಡಗಿನಲ್ಲಿ ವ್ಯಾಪಾರಿ ನಾವಿಕನಾಗಿ ಕೆಲಸ ಮಾಡುತ್ತಿದ್ದ ಅವರ ತಂದೆಯ ಸಾವಿನ ನಂತರ, ಆರು ಮಕ್ಕಳನ್ನು ಸಾಕಿ ಬೆಳೆಸುವ ಸಂಪೂರ್ಣ ಹೊಣೆ ತಾಯಿ ಥೆಲ್ಮಾ ಸೋಬರ್ಸ್ ಅವರ ಮೇಲಿದ್ದ ಪರಿಣಾಮ ಸೋಬರ್ಸ್ ಅವರ ಬಾಲ್ಯ ಸುಖಕರವಾಗಿರಲಿಲ್ಲ. ಕೌಟುಂಬಿಕ ಆರ್ಥಿಕ ಸಂಕಷ್ಟಗಳ ನಡುವೆಯೂ ಮಕ್ಕಳನ್ನು ಬೆಳೆಸಿದ ತಾಯಿಯ ತ್ಯಾಗವೇ ಗ್ಯಾರಿ ಸೋಬರ್ಸ್ ಅವರ ಬದುಕಿನ ದೊಡ್ಡ ಶಕ್ತಿಯಾಗಿತ್ತು.

**ಆರು ಬೆರಳುಗಳೊಂದಿಗೆ ಜನಿಸಿದ್ದ ಅಪರೂಪದ ಬಾಲಕ**


ಹಲವರಿಗೆ ಗೊತ್ತಿಲ್ಲದ ಒಂದು ಕುತೂಹಲಕಾರಿ ಸಂಗತಿಯೆಂದರೆ ಗ್ಯಾರಿ ಸೋಬರ್ಸ್ ಅವರು ಎರಡೂ ಕೈಗಳಲ್ಲಿ ಆರು ಬೆರಳುಗಳೊಂದಿಗೆ ಜನಿಸಿದ್ದರು. ಅಂದಿನ ಕಾಲದಲ್ಲಿ ಈಗಿನಂತೆ ಶಸ್ತ್ರಚಿಕಿತ್ಸೆ ಅಷ್ಟೇನೂ ಪ್ರಾಮುಖ್ಯತೆ ಪಡೆಯದಿದ್ದಂತಹ ಕಾಲದಲ್ಲಿ ಸಣ್ಣ ವಯಸ್ಸಿನಲ್ಲಿಯೇ ಕ್ಯಾಟ್‌ಗಟ್ ಮತ್ತು ಚೂಪಾದ ಚಾಕುಗಳ ಸಹಾಯದಿಂದ ಎರಡೂ ಕೈಗಳಲ್ಲಿದ್ದ ಆರನೇ ಬೆರಳುಗಳನ್ನು ತೆಗೆದುಹಾಕಲಾಯಿತು. ವೆಸ್ಟ್ ಇಂಡೀಸ್ ದ್ವೀಪದ ಎಲ್ಲರಂತೆಯೇ ಸೋಬರ್ಸ್ ಕೂಡಾ ಬಾಲ್ಯದಿಂದಲೇ ಕ್ರಿಕೆಟ್, ಫುಟ್ಬಾಲ್ ಮತ್ತು ಬ್ಯಾಸ್ಕೆಟ್‌ಬಾಲ್ ಆಟಗಳನ್ನು ಆಡುತ್ತಲೇ ಆರಂಭವಾದ ಅವರ ಬಾಲ್ಯ, ತಮ್ಮ ಅತ್ಯಂತ ಉತ್ಸಾಹ ಮತ್ತು ತಮ್ಮ ನೈಸರ್ಗಿಕ ಸಾಮರ್ಥ್ಯಗಳಿಂದಲೇ ಈ ಎಲ್ಲಾ ಈ ಎಲ್ಲಾ ಆಟಗಳಲ್ಲಿಯೂ ಪ್ರಬುದ್ಧರಾದರೂ, ಅಂತಿಮವಾಗಿ ಅವರು ಒಲವು ತೋರಿಸಿದ್ದು ಕ್ರಿಕೆಟ್ ಆಟದತ್ತವೇ. ಬಾರ್ಬಡೋಸ್‌ನ ಕಡಲತೀರಗಳಲ್ಲಿ ಬಿದ್ದಿರುತ್ತಿದ್ದ ಸಣ್ಣ ಸಣ್ಣ ತೆಂಗಿನ ಮರದ ಕಾಯಿಗಳೇ ಅವರಿಗೆ ಚೆಂಡು ಮತ್ತು ತೆಂಗಿನ ಸೋಗೆಯೇ ಅವರ ಬ್ಯಾಟುಗಳಾಗಿಸಿಕೊಂಡು ತನ್ನ ಸ್ನೇಹಿತರೊಂದಿಗೆ ಕ್ರಿಕೆಟ್ ಆಡಲು ಆರಂಭಿಸಿದ ಸೋಬರ್ಸ್ ನಂತರದ ದಿನಗಳಲ್ಲಿ ತಮ್ಮ ಮನೆಯ ಸುತ್ತಮುತ್ತಲಿನ ಬೀದಿಗಳು ಮತ್ತು ಖಾಲಿ ಮೈದಾನಗಳೇ ಅವರ ಕ್ರಿಕೆಟ್ ವಿಶ್ವವಿದ್ಯಾಲಯವಾಗಿದ್ದವು.

**16ನೇ ವಯಸ್ಸಿಗೇ ಪ್ರಥಮ ದರ್ಜೆ ಕ್ರಿಕೆಟ್**

ಕೇವಲ 16ನೇ ವಯಸ್ಸಿನಲ್ಲಿ ಬಾರ್ಬಡೋಸ್ ಪರ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ. ಭಾರತ ತಂಡದ ವಿರುದ್ಧ ಆಡಿದ ಪಂದ್ಯದಲ್ಲಿ 7 ವಿಕೆಟ್‌ಗಳನ್ನು ಪಡೆದು ಎಲ್ಲರ ಗಮನ ಸೆಳೆದರು.

ಮುಂದಿನ ವರ್ಷವೇ ಕೇವಲ 17ನೇ ವಯಸ್ಸಿನಲ್ಲಿ ಇಂಗ್ಲೆಂಡ್ ವಿರುದ್ಧ ವೆಸ್ಟ್ ಇಂಡೀಸ್ ಪರ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು.

**21ನೇ ವಯಸ್ಸಿನಲ್ಲಿ ನಿರ್ಮಿಸಿದ ಅಮರ ದಾಖಲೆ**



1958ರಲ್ಲಿ ಜಮೈಕಾದಲ್ಲಿ ನಡೆದ ಪಾಕಿಸ್ತಾನ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಕೇವಲ 21 ವರ್ಷದ ಸೋಬರ್ಸ್ 365 ರನ್‌ಗಳ ಅಜೇಯ ಇನ್ನಿಂಗ್ಸ್ ಆಡಿದರು. ಆ ಕಾಲದಲ್ಲಿ ಇದು ಟೆಸ್ಟ್ ಕ್ರಿಕೆಟ್ ಇತಿಹಾಸದ ಅತ್ಯಧಿಕ ವೈಯಕ್ತಿಕ ಮೊತ್ತವಾಗಿತ್ತು. ಈ ದಾಖಲೆ 36 ವರ್ಷಗಳ ಕಾಲ ಅಜೇಯವಾಗಿಯೇ ಉಳಿಯಿತು. 1994ರಲ್ಲಿ ಬ್ರಿಯಾನ್ ಲಾರಾ 375 ರನ್ ಗಳಿಸಿದ ನಂತರವೇ ಈ ದಾಖಲೆ ಮುರಿಯಲಾಯಿತು.

**ಒಂದೇ ಓವರ್‌ನಲ್ಲಿ ಆರು ಸಿಕ್ಸರ್**

★ ಇಂಗ್ಲೆಂಡ್‌ನ ಕೌಂಟಿ ಕ್ರಿಕೆಟ್. ನಾಟಿಂಗ್‌ಹ್ಯಾಮ್‌ಶೈರ್ ಪರ ಆಡುತ್ತಿದ್ದ ಗ್ಯಾರಿ ಸೋಬರ್ಸ್. ಗ್ಲಾಮರ್ಗನ್ ವಿರುದ್ಧದ ಪಂದ್ಯ. ಮಧ್ಯಮ ವೇಗಿ ಮಾಲ್ಕಂ ನ್ಯಾಶ್ ಎಸೆದ ಒಂದು ಓವರ್ ಪ್ರತಿ ಎಸೆತವೂ ಬೌಂಡರಿ ದಾಟಿತು. ಒಟ್ಟು 6 ಎಸೆತಗಳು 6 ಸಿಕ್ಸರ್‌ಗಳು ಪ್ರಥಮ ದರ್ಜೆ ಕ್ರಿಕೆಟ್ ಇತಿಹಾಸದಲ್ಲೇ ಈ ಸಾಧನೆ



ಮಾಡಿದ ಮೊದಲ ಆಟಗಾರ ಎಂಬ ಗೌರವ ಸೋಬರ್ಸ್ ಅವರದಾಯಿತು.

**ಹೆಲ್ಮೆಟ್ ಇಲ್ಲದ ಯುಗದ ಸಾಹಸಿ**

ಇಂದಿನಂತೆ ಹೆಲ್ಮೆಟ್, ಆಧುನಿಕ ರಕ್ಷಣಾ ಸಾಧನಗಳೇ ಇಲ್ಲದ ಕಾಲ. ಅತ್ಯಂತ ವೇಗದ ಬೌಲರ್‌ಗಳ ಎದುರು ಸೋಬರ್ಸ್ ಆಡಿದ ಸಾಧನೆಗಳು ಇಂದಿಗೂ ಅಚ್ಚರಿ ಮೂಡಿಸುತ್ತವೆ.

### ಟೆಸ್ಟ್ ವೃತ್ತಿಜೀವನ

- ಪಂದ್ಯಗಳು 93
- ರನ್ 8,032
- ಬ್ಯಾಟಿಂಗ್ ಸರಾಸರಿ 57.78
- ಶತಕಗಳು 26
- ವಿಕೆಟ್‌ಗಳು 235

**ಈ ಅಂಕಿ-ಅಂಶಗಳು ಇಂದಿಗೂ ಆಲ್ ರೌಂಡರ್‌ಗಳಿಗೆ ಮಾನದಂಡವಾಗಿವೆ.**

### ಆ ಪಂದ್ಯದಲ್ಲಿ...

- ಶೂನ್ಯಕ್ಕೆ ಔಟಾದರು.
- ಆದರೆ ಒಂದು ವಿಕೆಟ್ ಪಡೆದರು.

### ಇಪ್ಪತ್ತು ವರ್ಷಗಳ ಟೆಸ್ಟ್ ಬದುಕು

- ಟೆಸ್ಟ್ ಪದಾರ್ಪಣೆ 1954
- ನಿವೃತ್ತಿ 1974

**ಏಕದಿನ ಕ್ರಿಕೆಟ್‌ನಲ್ಲಿ ಒಂದೇ ಪಂದ್ಯ**

ಆಶ್ಚರ್ಯಕರ ಸಂಗತಿಯೆಂದರೆ ಸೋಬರ್ಸ್ ಅವರ ಏಕದಿನ ಅಂತಾರಾಷ್ಟ್ರೀಯ ವೃತ್ತಿಜೀವನ ಕೇವಲ ಒಂದೇ ಪಂದ್ಯಕ್ಕೆ ಸೀಮಿತವಾಯಿತು.

ಸುಮಾರು ಎರಡು ದಶಕಗಳ ಕಾಲ ವಿಶ್ವ ಕ್ರಿಕೆಟ್‌ನಲ್ಲಿ ವೆಸ್ಟ್ ಇಂಡೀಸ್ ತಂಡದ ಬೆನ್ನೆಲುಬಾಗಿ ನಿಂತರು.

**ಸರ್ ಗೌರವ**

ಕ್ರಿಕೆಟ್‌ಗೆ ನೀಡಿದ ಅನನ್ಯ ಸೇವೆಯನ್ನು ಗುರುತಿಸಿ ಬ್ರಿಟನ್ ಸರ್ಕಾರ ಅವರಿಗೆ ಸರ್ ಗೌರವವನ್ನು ನೀಡಿತು. ಆ ಬಳಿಕ ಅವರು ವಿಶ್ವದಾದ್ಯಂತ... ಸರ್ ಗಾರ್ಫೀಲ್ಡ್ ಸೋಬರ್ಸ್ ಎಂದೇ ಪ್ರಸಿದ್ಧರಾದರು.




ವೆಸ್ಟ್ ಇಂಡೀಸ್‌ನ ದಿಗ್ಗಜ ಕ್ರಿಕೆಟಿಗ ಸರ್ ಗಾರ್ಫೀಲ್ಡ್ ಸೋಬರ್ಸ್ ಅವರ ಗೌರವಾರ್ಥ ಅವರ ತವರು ದೇಶವಾದ ಬಾರ್ಬಡೋಸ್‌ನಲ್ಲಿ ಸರ್ ಗ್ಯಾರಿ ಸೋಬರ್ಸ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮತ್ತು ಗಾರ್ಫೀಲ್ಡ್ ಸೋಬರ್ಸ್ ಜಿಮ್ನಾಷಿಯಂ ಒಳಾಂಗಣ ಕ್ರೀಡಾಂಗಣವಿದೆ. ಅದೇ ರೀತಿಯಾಗಿ ಬಾರ್ಬಡೋಸ್‌ನ ಐತಿಹಾಸಿಕ ಕೆನ್ನಿಂಗ್ಟನ್ ಓವಲ್‌ನಲ್ಲಿರುವ ಪೆವಿಲಿಯನ್‌ನಲ್ಲಿ, ಅವರ ಹೆಸರಿನಲ್ಲಿಯೇ ಒಂದು ಸ್ಟ್ಯಾಂಡ್ ಮತ್ತು ಪ್ರಸಿದ್ಧ ಪ್ರತಿಮೆಗಳನ್ನು ನಿರ್ಮಿಸುವ ಮೂಲಕ ಆ ಕ್ರಿಕೆಟ್ ದೈತ್ಯನ ಸಾಧನೆಯನ್ನು ಚಿರಾಯುವಾಗಿ ಮಾಡಿರುವುದು ಸ್ವಾಗತಾರ್ಹವಾಗಿದೆ.

**ಭಾರತೀಯ ಚಲನಚಿತ್ರ ನಟಿ ಅಂಜು ಮಹೇಂದ್ರು ಅವರೊಂದಿಗೆ ನಡೆದಿತ್ತು ನಿಶ್ಚಿತಾರ್ಥ**



1966-1967ರ ಅವಧಿಯಲ್ಲಿ ವೆಸ್ಟ್ ಇಂಡೀಸ್ ತಂಡವು ಭಾರತ ಪ್ರವಾಸದಲ್ಲಿದ್ದಾಗ ಅದಾಗಲೇ ಭಾರತೀಯ ಚಿತ್ರರಂಗದಲ್ಲಿ ಪ್ರಸಿದ್ಧ ನಟಿಯಾಗಿದ್ದ ಅಂಜು ಮಹೇಂದ್ರು ಅವರನ್ನು ಯಾವುದೋ ಒಂದು ಪಾರ್ಟಿಯಲ್ಲಿ ಭೇಟಿಯಾದ ನಂತರ ಅವರಿಬ್ಬರ ನಡುವೆ ಉತ್ತಮ ಸ್ನೇಹ ಏರ್ಪಟ್ಟು ಅದು ಪ್ರೇಮಕ್ಕೆ ತಿರುಗಿ ಅವರಿಬ್ಬರೂ ನಿಶ್ಚಿತಾರ್ಥವನ್ನೂ ಮಾಡಿಕೊಂಡಿದ್ದರು. ಆದರೆ ಇಬ್ಬರೂ ತಮ್ಮ ತಮ್ಮ ವೃತ್ತಿ ಜೀವನದಲ್ಲಿ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಎರಡೂ ದೇಶಗಳ ದೂರದ ಅಂತರ ಮತ್ತು ವೃತ್ತಿಜೀವನದ ಬಿಡುವಿಲ್ಲದ ಮತ್ತು ಹೊಂದಾಣಿಕೆಯಾಗದ ವೇಳಾಪಟ್ಟಿಗಳ ಕಾರಣದಿಂದಾಗಿ ಪರಸ್ಪರ ಸಮಯವನ್ನು ನೀಡಲು ಸಾಧ್ಯವಾಗದೇ ಇದ್ದ ಕಾರಣ, ಅವರ ಸಂಬಂಧವು ಮೂರ್ನಾಲ್ಕು ವರ್ಷಗಳಲ್ಲಿಯೇ ಕೊನೆಗೊಂಡರೂ, ಸೋಬರ್ಸ್ ತಮ್ಮ ಆತ್ಮಕಥೆಯಲ್ಲಿ ಆ ಪ್ರಣಯದ ದಿನಗಳನ್ನು ಪ್ರೀತಿಯಿಂದ ನೆನಪಿಸಿಕೊಂಡಿದ್ದರು.

ಅವರು ಸೆಪ್ಟೆಂಬರ್ 1969 ರಲ್ಲಿ ಆಸ್ಟ್ರೇಲಿಯಾದ ಪ್ರುಡೆನ್ಸ್ ಪ್ರು ಕಿರ್ಬಿ ಅವರೊಂದಿಗೆ ಮದುವೆಯಾಗಲು ಅನುಮತಿ ಕೋರಿ ಸೋಬರ್ಸ್ ಅವರು ಮಹೇಂದ್ರು ಅವರಿಗೆ ಪತ್ರವನ್ನೂ ಬರೆದಿದ್ದದ್ದು ಗಮನಾರ್ಹವಾಗಿತ್ತು. ಹೀಗೆ ಆಸ್ಟ್ರೇಲಿಯಾದ ಗೆಳತಿಯನ್ನು ಮದುವೆಯಾಗಿದ್ದ ಕಾರಣ ಸೋಬರ್ಸ್ ಅವರಿಗೆ ಅಲ್ಲಿನ ಪೌರತ್ವವೂ ಲಭಿಸಿ, ಸೋಬರ್ಸ್ ವೆಸ್ಟ್ ಇಂಡೀಸ್ ಮತ್ತು ಆಸ್ಟ್ರೇಲಿಯಾ ದೇಶಗಳ ಉಭಯ ಪೌರತ್ವವನ್ನು ಹೊಂದಿದ್ದರು. ಈ ಸುಂದರ ದಾಂಪತ್ಯದ ಕುರುಹಾಗಿ ಸೋಬರ್ಸ್ ಅವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ದತ್ತುಪುತ್ರಿ ಇದ್ದರು. ವಿವಿಧ ಕಾರಣಗಳಿಂದಾಗಿ 1984 ರಲ್ಲಿ ದಂಪತಿಗಳು ಬೇರ್ಪಟ್ಟು, ನಂತರ 1990 ರಲ್ಲಿ ವಿವಾಹವು ವಿಚ್ಛೇದನದಲ್ಲಿ ಕೊನೆಗೊಂಡಿತು.

**90ನೇ ಹುಟ್ಟುಹಬ್ಬಕ್ಕೆ ಕೇವಲ 10 ದಿನಗಳು ಬಾಕಿ ಇರುವಾಗಲೇ ನಿಧನ**

2026ರ ಜುಲೈ 17ರಂದು ತಮ್ಮ 90ನೇ ಹುಟ್ಟುಹಬ್ಬಕ್ಕೆ ಕೇವಲ 10 ದಿನಗಳು ಬಾಕಿ ಇರುವಾಗಲೇ ವಯೋಸಹಜವಾಗಿ ಗ್ಯಾರಿ ಸೋಬರ್ಸ್ ಅವರು ನಿಧನರಾಗಿದ್ದಾರೆ ಎಂದು ಅವರ ಪುತ್ರ ಡೇನಿಯಲ್ ಸೋಬರ್ಸ್ ಅವರು ದೃಢಪಡಿಸುವ ಮೂಲಕ ಕ್ರಿಕೆಟ್ ಲೋಕ ತನ್ನ ಒಬ್ಬ ಯುಗಪುರುಷನನ್ನು ಕಳೆದುಕೊಂಡಿದೆ ಎಂದರೂ ಅತಿಶಯವಾಗದು.

**ಏಕೆ ಇಂದಿಗೂ ಸರ್ವಶ್ರೇಷ್ಠ?**

ಕಪಿಲ್ ದೇವ್ ವೇಗದ ಬೌಲಿಂಗ್ ಮಾಡುತ್ತಿದ್ದರು. ಇಮ್ರಾನ್ ಖಾನ್ ವೇಗದ ಬೌಲಿಂಗ್ ಜೊತೆಗೆ ನಾಯಕತ್ವದಲ್ಲಿ ಮಿಂಚಿದರು. ಜಾಕ್ ಕಾಲಿಸ್ ಅಸಾಧಾರಣ ಬ್ಯಾಟ್ಸ್ ಮನ್. ಬೆನ್ ಸ್ಟೋಕ್ಸ್ ಆಧುನಿಕ ಯುಗದ ಮ್ಯಾಚ್ ವಿನ್ನರ್.

### ಆದರೆ.... ಒಬ್ಬ ಆಟಗಾರ....

- ಮೂರು ರೀತಿಯ ಬೌಲಿಂಗ್ ಮಾಡುವುದು,
- ವಿಶ್ವಮಟ್ಟದ ಬ್ಯಾಟಿಂಗ್,
- ಅತ್ಯುತ್ತಮ ಫೀಲ್ಡಿಂಗ್,
- ನಾಯಕತ್ವ

ಇವೆಲ್ಲವನ್ನೂ ಒಂದೇ ಮಟ್ಟದಲ್ಲಿ ಮಾಡಿರುವ ಉದಾಹರಣೆ ಕ್ರಿಕೆಟ್ ಇತಿಹಾಸದಲ್ಲಿ ಅಪರೂಪ. ಅದಕ್ಕಾಗಿಯೇ ಗ್ಯಾರಿ ಸೋಬರ್ಸ್ ಅವರನ್ನು ಇಂದಿಗೂ ಸಾರ್ವಕಾಲಿಕ ಶ್ರೇಷ್ಠ ಆಲ್-ರೌಂಡರ್ ಎಂದು ಕರೆಯಲಾಗುತ್ತದೆ.

**ಒಂದು ಯುಗದ ಅಂತ್ಯ**



ಕೆಲವರು ದಾಖಲೆಗಳನ್ನು ನಿರ್ಮಿಸುತ್ತಾರೆ. ಕೆಲವರು ಆಟವನ್ನು ಬದಲಿಸುತ್ತಾರೆ. ಆದರೆ ಕೆಲವೇ ಕೆಲವು ಮಹಾನ್ ವ್ಯಕ್ತಿಗಳು ಆಟದ ವ್ಯಾಖ್ಯಾನವನ್ನೇ ಬದಲಿಸುತ್ತಾರೆ. ಗ್ಯಾರಿ ಸೋಬರ್ಸ್ ಅಂತಹವರಲ್ಲಿ ಒಬ್ಬರು. ಅವರು ನಿವೃತ್ತಿಯಾದರೂ 52 ವರ್ಷಗಳ ನಂತರವೂ ಕ್ರಿಕೆಟ್ ಲೋಕ ಅವರನ್ನು ಸರ್ವಶ್ರೇಷ್ಠ ಆಲ್‌ರೌಂಡರ್ ಎಂದೇ ಗೌರವಿಸುತ್ತಿದೆ. ಅವರಂತಹ ಪ್ರತಿಭೆ ಮತ್ತೊಮ್ಮೆ ಹುಟ್ಟಬಹುದೇ? ಬಹುಶಃ ಇಲ್ಲ. ಏಕೆಂದರೆ ಸರ್ ಗ್ಯಾರಿ ಸೋಬರ್ಸ್ ಕೇವಲ ಒಬ್ಬ ಕ್ರಿಕೆಟಿಗನಲ್ಲ ಕ್ರಿಕೆಟ್ ಇತಿಹಾಸದ ಜೀವಂತ ದಂತಕಥೆಯಾಗಿದ್ದರು ಎನ್ನುವುದೇ ಸತ್ಯ ಅಲ್ವೇ?

ಏನಂತೀರೀ?

ನಿಮ್ಮವನೇ ಉಮಾಸುತ

## ರಕ್ತ ಸಿಕ್ತ ದೆಹಲಿ : ಇದು ಒಳ್ಳೆಯ ಬೆಳವಣಿಗೆಯಲ್ಲ!

ದೆಹಲಿ ವಿದ್ಯಾರ್ಥಿಗಳ ಪ್ರತಿಭಟನೆ ಲಾಟಿಚಾರ್ಜ್ ಹಂತಕ್ಕೆ ತಲುಪುವ ಮೊದಲೇ ಸರ್ಕಾರ ಒಂದಷ್ಟು ಮಾತುಕತೆ ನಡೆಸಿದ್ದರೆ ಉತ್ತಮ ನಿರ್ಧಾರವಾಗುತ್ತಿತ್ತು. ಏಕೆಂದರೆ ವಿದ್ಯಾರ್ಥಿಗಳನ್ನು, ಈ ದೇಶದ ಯುವಸಮೂಹವನ್ನು ಲಾಠಿಗಳಲ್ಲಿ ಹೊಡೆಯುವುದು ಕೇವಲ ಅವರ ಮೇಲಿನ ದೈಹಿಕ ಹಲ್ಲೆ ಮಾತ್ರವಲ್ಲ ಭವಿಷ್ಯದ ಹಿಂಸಾತ್ಮಕ ಮನೋಭಾವಕ್ಕೆ ಪೀಠಿಕೆ ಬರೆದಂತಾಗುತ್ತದೆ. ಏಕೆಂದರೆ ಈ ಹಿಂದಿನ ಕಾಲದಂತೆ ಪೋಷಕರಿಂದ ಹೊಡೆತ ತಿಂದು ಬೆಳೆದವರಲ್ಲ ಈ ಮಕ್ಕಳು. ಹೆಚ್ಚು ಕಡಿಮೆ, ಹೊಡೆತ ರಹಿತವಾಗಿ, ಬೈಗುಳ ರಹಿತವಾಗಿ, ಒಂದಷ್ಟು ಸುಖವಾಗಿ, ಮತ್ತಷ್ಟು ಸ್ವತಂತ್ರವಾಗಿ, ಇನ್ನೊಂದಿಷ್ಟು ಸ್ವೇಚ್ಛೆಯಾಗಿ ಬೆಳೆದಂತಹವರು. ಇವರ ಬೆವರ ಹನಿಗಳು ಜಿಮ್‌ನಲ್ಲಿ, ಬೇಸಿಗೆಯಲ್ಲಿ, ಅಪರೂಪಕ್ಕೆ ನಡೆದಾಟ, ಟ್ರೆಕ್ಕಿಂಗ್‌ನಲ್ಲಿ ಉದುರಿದಂತಹುದು. ಮೊಬೈಲ್‌ನಲ್ಲಿ ಅರ್ಧ ಜೀವನ ಕಳೆದಂತಹವರು. ಪೊಲೀಸರ ಲಾಠಿ ಏಟಿನ ರುಚಿ ಎಂದೂ ಕಂಡವರಲ್ಲ. ಪೊಲೀಸರು ಈ ಪರಿ ಅಟ್ಟಾಡಿಸಿ ಹೊಡೆಯುತ್ತಾರೆ ಎಂದು ಭಾವಿಸಿದವರಲ್ಲ. ಇಷ್ಟೊಂದು ನಮ್ಮ ಮೇಲೆ ದೌರ್ಜನ್ಯ ನಡೆಯುತ್ತದೆ ಎಂದು ನಿರೀಕ್ಷಿಸಿದವರೂ ಅಲ್ಲ, ಅವರ ಮೂಳೆ ಮಾಂಸಗಳು ಇನ್ನೂ ಬಲಿತಿಲ್ಲ. ಆ ದೃಷ್ಟಿಯಿಂದ ಈ ವಿದ್ಯಾರ್ಥಿಗಳ ಮೇಲೆ ಪೊಲೀಸರ ಹಲ್ಲೆ ಖಂಡನಾರ್ಹ.

ಯುವಶಕ್ತಿಯನ್ನು ಅಪಾರವಾಗಿ ಪ್ರೀತಿಸುವ ನಮ್ಮಂತಹವರಿಗೆ, ಈ ದೇಶದ ರಾಜಧಾನಿಯಲ್ಲಿ ನಡೆದ ಈ ಘಟನೆಗಳು ಮನಸ್ಸಿಗೆ ಘಾಸಿಯನ್ನು ಉಂಟು ಮಾಡಿದೆ. ಕಾರಣಗಳೇನೆ ಇರಲಿ, ಪರಿಸ್ಥಿತಿ ಏನೇ ಇರಲಿ, ಸರಿ ತಪ್ಪುಗಳು ಯಾರದೇ ಇರಲಿ ಆದರೆ ವಿದ್ಯಾರ್ಥಿಗಳನ್ನು ಇಷ್ಟೊಂದು ಅಮಾನವೀಯವಾಗಿ ನಡೆಸಿಕೊಂಡಿದ್ದು ತಪ್ಪು. ಇದನ್ನು ಮೊದಲೇ ಗ್ರಹಿಸಿ ತಡೆಯುವ ಸಾಧ್ಯತೆ ಖಂಡಿತ ಇತ್ತು.

ಹೌದು, ಸಂಸತ್ ಮುತ್ತಿಗೆ ಕಾರ್ಯಕ್ರಮ, ಪ್ರತಿಭಟನೆ, ಮೆರವಣಿಗೆ ಯಾರೇ ಮಾಡಿದರು ಅದನ್ನು ತಡೆಯಲೇಬೇಕು. ಅದು ದೇಶದ ಭದ್ರತೆ ಮತ್ತು ರಕ್ಷಣೆಯ ದೃಷ್ಟಿಯಿಂದ ಮಹತ್ವದ್ದು. ಯಾವುದೇ ವಿಧಾನಸೌಧ ಛಲೋ ಎಂಬುದೂ ಸಹ ಸಾಂಕೇತಿಕವೇ ಹೊರತು ವಿಧಾನಸಭೆಯನ್ನು ಆಕ್ರಮಿಸಲು ಬಿಡವುದು ಸಾಧ್ಯವಿಲ್ಲ, ಹಾಗೆಯೇ ಸಂಸತ್ತು ಚಲೋ ಪ್ರತಿಭಟನೆ. ಆದರೆ ಸುಮಾರು 40 ದಿನಗಳ ಪ್ರತಿಭಟನಾ ನಿರತರು, 20 ದಿನಗಳ ಉಪವಾಸ ಸತ್ಯಾಗ್ರಹ ಮತ್ತು ನಿನ್ನೆಯ ಸಂಸತ್ ಚಲೋ ಮೆರವಣಿಗೆ ನಿರೀಕ್ಷಿತವೇ. ಆದ್ದರಿಂದ ಅದನ್ನು ಪ್ರಾರಂಭಿಕ ಹಂತದಲ್ಲಿಯೇ ನಿಲ್ಲಿಸುವ ಪ್ರಯತ್ನಗಳನ್ನು ಮಾಡಬೇಕಿತ್ತು. ಸರ್ಕಾರ ಇಷ್ಟೊಂದು ಅಸೂಕ್ಷ್ಮವಾಗಿ ನಿರ್ಲಕ್ಷ್ಯ ಮಾಡಬಾರದಿತ್ತು.



ದೇಶದ ಇಡೀ ಆಡಳಿತ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ, ಶೈಕ್ಷಣಿಕ ವ್ಯವಸ್ಥೆ, ಕೌಟುಂಬಿಕ ವ್ಯವಸ್ಥೆ, ರಕ್ಷಣಾ ವ್ಯವಸ್ಥೆ, ರೈತರ ಶ್ರಮ ಸೇರಿ ಎಲ್ಲವೂ, ಎಲ್ಲರೂ ಶ್ರಮಪಡುವುದು, ಕಾರ್ಯನಿರ್ವಹಿಸುವುದು ಬಹುತೇಕ ಯುವ ಸಮೂಹದ ಹಿತಾಸಕ್ತಿಗಾಗಿ. ಏಕೆಂದರೆ ಯುವಕರೇ ಈ ದೇಶದ ಭವಿಷ್ಯ. ಅವರಿಗಾಗಿಯೇ ಹೆಚ್ಚು ಆಸಕ್ತಿಯಿಂದ, ಶ್ರಮದಿಂದ ಪ್ರತಿಯೊಬ್ಬರೂ ಕಾರ್ಯ ನಿರ್ವಹಿಸುವುದು. ಅಂತಹ ಯುವಶಕ್ತಿಯನ್ನು, ವಿದ್ಯಾರ್ಥಿ ಶಕ್ತಿಯನ್ನು ಸಾಧ್ಯವಾದಷ್ಟು ಪ್ರೀತಿಯಿಂದ, ಗೌರವದಿಂದ, ಅಭಿಮಾನದಿಂದ, ಜವಾಬ್ದಾರಿಯಿಂದ ನಿರ್ವಹಿಸಿ ಮಾರ್ಗದರ್ಶನ ಮಾಡಬೇಕಾದದ್ದು ವ್ಯವಸ್ಥೆಯ ಕರ್ತವ್ಯ.

ವಿದ್ಯಾರ್ಥಿಗಳು ಬಿಸಿ ರಕ್ತದ ಭರದಲ್ಲಿ ಒಂದಷ್ಟು ಆಕ್ರೋಶ ವ್ಯಕ್ತಪಡಿಸುವುದು, ತಪ್ಪು ದಾರಿ ಹಿಡಿಯುವುದು ಸಹಜವೇ ಆಗಿರುತ್ತದೆ. ಏಕೆಂದರೆ ನಾವು ಕೂಡ ಒಂದು ಹಂತದಲ್ಲಿ ವಿದ್ಯಾರ್ಥಿ ಜೀವನವನ್ನು ಅನುಭವಿಸಿ ಬಂದವರೇ. ಆದ್ದರಿಂದ ಜವಾಬ್ದಾರಿಯುತ ನಾಗರಿಕ ಸರ್ಕಾರ ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕು ಮತ್ತು ಕೆಲವೊಮ್ಮೆ ಅವರಿಗಾಗಿ ಒಂದಷ್ಟು ತ್ಯಾಗ ಮಾಡಬೇಕಾದ ಅವಶ್ಯಕತೆಯು, ಅನಿವಾರ್ಯತೆಯೂ ಇರುತ್ತದೆ. ಏಕೆಂದರೆ ಅವರು ನಮ್ಮ ಮಕ್ಕಳು.

ಸರಿ ತಪ್ಪುಗಳನ್ನು ವಿಮರ್ಶಿಸುವುದಕ್ಕಿಂತ, ರಾಜಕೀಯ ಚಟುವಟಿಕೆಗಳನ್ನು ಮೀರಿ ಯುವಶಕ್ತಿಯನ್ನು ಅತ್ಯಂತ ಆತ್ಮೀಯತೆಯಿಂದ ಮಾತನಾಡಿಸಬೇಕಾಗುತ್ತದೆ. ಅವರ ಮನಸ್ಥಿತಿಯನ್ನು ಅರಿತು ಕೆಲವು ನಿರ್ಧಾರಗಳನ್ನು ಕೈಗೊಳ್ಳಬೇಕಾಗುತ್ತದೆ. ಯಾರದೋ ಮೇಲಿನ ಕೋಪದಿಂದ ಇನ್ಯಾರನ್ನೋ ದಂಡಿಸಲು, ಬೆದರಿಸಲು ಇನ್ನೂ ಹಾಲುಗಲ್ಲದ ಯುವಕರ ಮೇಲೆ ಲಾಠಿ ಚಾರ್ಜ್ ಮಾಡುವುದು ಅಷ್ಟೇನೂ ಉತ್ತಮ ನಡೆಯಲ್ಲ, ಅನಿವಾರ್ಯವೂ ಅಲ್ಲ.

ಮೊದಲೇ ಹೇಳಿದಂತೆ ಪಾರ್ಲಿಮೆಂಟ್ ರಕ್ಷಣೆ ಮಾಡಬೇಕಾದ್ದು ಪೊಲೀಸರ ಕರ್ತವ್ಯವೇನೊ ನಿಜ, ಆದರೆ ಅದಕ್ಕಿಂತ ಮೊದಲೇ ಆಡಳಿತ ವ್ಯವಸ್ಥೆ ಇದನ್ನು ನಿಯಂತ್ರಿಸಲು ಪ್ರಯತ್ನ ಪಡಬೇಕಾಗಿತ್ತು. ಈಗ ಒಂದು ಹಂತದ ಹಿಂಸೆ ನಡೆದು ಹೋಗಿದೆ. ಚೀನಾದ ತಿಯಾನ್ಮನ್ ಚೌಕದ ಹತ್ಯಾಕಾಂಡ ಜಗತ್ತಿನ ಕೆಲವೇ ಹಿಂಸಾತ್ಮಕ ಘಟನೆಗಳಲ್ಲಿ ಒಂದಾಗಿ ಇತಿಹಾಸದಲ್ಲಿ ದಾಖಲಾಗಿದೆ. ಅಂದು ಪ್ರಜಾಪ್ರಭುತ್ವಕ್ಕಾಗಿ ನಡೆದ ಆ ವಿದ್ಯಾರ್ಥಿಗಳ ಚಳುವಳಿಯ ಮೇಲೆ ಚೀನಾ ಸರ್ಕಾರ ಯುದ್ಧ ಟ್ಯಾಂಕುಗಳನ್ನು ನುಗ್ಗಿಸಿ ಅನೇಕರ ಸಾವು ನೋವಿಗೆ ಕಾರಣವಾದ ಘಟನೆ ನಡೆದೇ ಹೋಯಿತು. ಅದು ಕಮ್ಯುನಿಸ್ಟ್ ಸರ್ಕಾರ. ಆದರೆ ನಿನ್ನೆಯ ದೆಹಲಿಯ ಈ ವಿದ್ಯಾರ್ಥಿಗಳ ಮೇಲಿನ ಘಟನೆ ಪ್ರಜಾಪ್ರಭುತ್ವ ದೇಶ ಭಾರತದಲ್ಲಿ ನಡೆಯಬಾರದಿತ್ತು.

ಈಗಲೂ ಕಾಲ ಮಿಂಚಿಲ್ಲ. ಸರ್ಕಾರ ಯುವಜನರ ಆಕ್ರೋಶವನ್ನು ಗಮನಿಸಿ ಶೀಘ್ರವೇ ಅತ್ಯಂತ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಈ ಸರ್ಕಾರದ ಮೇಲಿರುವ ಸರ್ವಾಧಿಕಾರಿ, ಬಂಡವಾಳಶಾಹಿ, ರೈತ, ಕಾರ್ಮಿಕ, ವಿದ್ಯಾರ್ಥಿಗಳ, ಬಡವರ ವಿರೋಧಿ ಎಂಬ ಆರೋಪಗಳು ಮತ್ತಷ್ಟು ದೃಢವಾಗುತ್ತಾ ಹೋಗುತ್ತದೆ. ಈ ಆಕ್ರೋಶ ಕೇವಲ ಒಂದು ಪರೀಕ್ಷೆ ಅಥವಾ ಒಬ್ಬ ವ್ಯಕ್ತಿಯ ರಾಜೀನಾಮೆಯ ಕಾರಣವೇನು ಅಲ್ಲ. ಇದರ ಹಿನ್ನೆಲೆ ದೀರ್ಘಕಾಲದಿಂದ ಮಡುಗಟ್ಟುತ್ತಾ ಬಂದ ಆಕ್ರೋಶದ ಪ್ರತಿಫಲನ.

ಇದು ರಾಷ್ಟ್ರವ್ಯಾಪಿ ಹಬ್ಬುವ ಮೊದಲು ಎಚ್ಚೆತ್ತುಕೊಳ್ಳಬೇಕಾಗಿರುವುದು ಸದ್ಯದ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ. ಇದು ಕೇವಲ ಕೇಂದ್ರ ಸರ್ಕಾರದ ವಿರುದ್ಧ ಮಾತ್ರವಲ್ಲ ಅನೇಕ ರಾಜ್ಯಗಳ ಕೆಟ್ಟ ಆಡಳಿತ ಮತ್ತು ಅದರ ದುಷ್ಪರಿಣಾಮಗಳ ಪರಿಣಾಮ ಯುವಶಕ್ತಿ ಜಾಗೃತಗೊಂಡು ಪ್ರತಿಭಟಿಸುವುದರ ಸಂಕೇತ. ದೇಶದ ಇತರ ಭಾಗಗಳಲ್ಲಿ, ವಿಶ್ವದ ಇತರ ಭಾಗಗಳಲ್ಲಿ ನಡೆದಂತ ದಂಗೆಯ ರೂಪದಲ್ಲಿ ಈ ದೇಶದ ವಿದ್ಯಾರ್ಥಿ ಚಳುವಳಿ ಮುಂದುವರಿಯಬಾರದು. ಅದು ಅತ್ಯಂತ ಅಪಾಯಕಾರಿ. ಆದ್ದರಿಂದ ಬೇಗ ಇದನ್ನೆಲ್ಲ ಗ್ರಹಿಸಿ ಏನಾದರೂ ಕ್ರಮವನ್ನು ಕೈಗೊಳ್ಳಬೇಕು.

ವಿದ್ಯಾರ್ಥಿಗಳ ಮೇಲಿನ ಹಿಂಸೆಯನ್ನು ನೋಡಿದಾಗ, ಆ ದೃಶ್ಯಗಳು ಇಡೀ ದೇಶದಾದ್ಯಂತ ವೈರಲ್ ಆಗಿ ಮತ್ತಷ್ಟು ಜನ ರೊಚ್ಚಿಗೆದ್ದು ಅದು ದಂಗೆಯ ರೂಪ ಪಡೆಯುವ ಮೊದಲು ಕೇಂದ್ರದ ಸರ್ಕಾರ ಅತ್ಯಂತ ಸಹಾನುಭೂತಿಯಿಂದ, ಪ್ರೀತಿಯಿಂದ ಈ ಪ್ರತಿಭಟನಾಕಾರರ ಅಹವಾಲು ಗಮನಿಸಿ ಕ್ರಮ ಕೈಗೊಳ್ಳಬೇಕು. ಇದು ಸಮೂಹ ಸಂಪರ್ಕ ಕ್ರಾಂತಿಯ, ಸಾಮಾಜಿಕ ಜಾಲತಾಣಗಳ ಸಮಯ. ಸದ್ಯದ ಒಬ್ಬ ಮಂತ್ರಿಯ ರಾಜೀನಾಮೆ ಪಡೆಯುವುದರಿಂದ ಅಂತಹ ದೊಡ್ಡ ನಷ್ಟವೇನು ಆಗುವುದಿಲ್ಲ. ಅವರಿಗೆ ಬೇರೆ ಖಾತೆಯನ್ನು, ಬೇರೆ ಅಧಿಕಾರವನ್ನು ನೀಡಬಹುದು. ಆದರೆ ಅದನ್ನು ನಿರ್ಲಕ್ಷಿಸಿ ಚುನಾವಣೆ ಗೆಲ್ಲುವ ತಂತ್ರಗಾರಿಕೆ ಮೇಲುಗೈ ಪಡೆದು ಈ ಘಟನೆಗಳನ್ನು ನಿರ್ಲಕ್ಷಿಸಿದರೆ ಸರ್ಕಾರಕ್ಕೆ ಏನು ಧಕ್ಕೆಯಾಗುತ್ತಿದೆಯೋ ಗೊತ್ತಿಲ್ಲ. ಆದರೆ ದೇಶದ ಅಭಿವೃದ್ಧಿಯ ಹಿತಾಸಕ್ತಿಗೆ ಖಂಡಿತ ಈ ಬೆಳವಣಿಗೆ ಮಾರಕವಾಗಬಹುದು, ಎಚ್ಚರ....

**- ವಿವೇಕಾನಂದ. ಎಚ್. ಕೆ., ಬೆಂಗಳೂರು**






## ಕತ್ತಿನ ಚರ್ಮ ಕಪ್ಪಾಗುವಿಕೆ ಅನಾರೋಗ್ಯದ ಲಕ್ಷಣವೇ?

ಕುತ್ತಿಗೆ ಹಾಗೂ ಗಲ್ಲದ ಸುತ್ತಲೂ ಹಠಾತ್ತಾಗಿ ಅಥವಾ ನಿಧಾನವಾಗಿ ಚರ್ಮ ಕಪ್ಪಾಗುವುದು ಇತ್ತೀಚೆಗೆ ಸಾಮಾನ್ಯ ಸಮಸ್ಯೆಯಾಗಿದೆ. ಆರಂಭದಲ್ಲಿ ಇದನ್ನು ಬಿಸಿಲು, ಧೂಳು ಅಥವಾ ಸರಿಯಾಗಿ ಸ್ವಚ್ಛಗೊಳಿಸದೇ ಇರುವುದೇ ಕಾರಣವೆಂದು ಭಾವಿಸಿ ಹಲವರು ನಿರ್ಲಕ್ಷಿಸುತ್ತಾರೆ. ಆದರೆ, ವೈದ್ಯಕೀಯ ತಜ್ಞರ ಪ್ರಕಾರ ಕುತ್ತಿಗೆಯ ಭಾಗದಲ್ಲಿ ಕಾಣಿಸಿಕೊಳ್ಳುವ ಈ ಬದಲಾವಣೆಗಳು ಕೇವಲ ಮೇಲ್ಮೈ ಚರ್ಮದ ಸಮಸ್ಯೆಯಲ್ಲ; ಬದಲಿಗೆ ನಮ್ಮ ದೇಹದ ಒಳಗಿನ ಆರೋಗ್ಯ ವ್ಯತ್ಯಾಸದ ಸೂಚನೆಯೂ ಆಗಿರಬಹುದು.

**ಕುತ್ತಿಗೆ ಕಪ್ಪಾಗುವುದರ ಜೊತೆಗೆ ಕಾಣಿಸಿಕೊಳ್ಳುವ ಮುಖ್ಯ ಲಕ್ಷಣಗಳು**

ಕುತ್ತಿಗೆಯ ಕಪ್ಪಾಗುವಿಕೆಯೊಂದಿಗೆ ದೇಹದಲ್ಲಿ ಇತರ ಕೆಲವು ಪ್ರಮುಖ ಬದಲಾವಣೆಗಳು ಎದ್ದು ಕಾಣಿಸಬಹುದು:

★ **ಚರ್ಮದಲ್ಲಿ ಬದಲಾವಣೆ:** ಕಪ್ಪಾದ ಭಾಗದ ಚರ್ಮ ದಪ್ಪಗಾಗುವುದು, ಒರಟಾಗುವುದು, ತುರಿಕೆ ಅಥವಾ ಉರಿ ಕಾಣಿಸಿಕೊಳ್ಳುವುದು.

★ **ಕಡಿಮೆಯಾಗದಿರುವ ಕಪ್ಪು ಬಣ್ಣ:** ಚರ್ಮವನ್ನು ಎಷ್ಟೇ ಸೋಪು ಅಥವಾ ಫೇಸ್‌ವಾಶ್ ನಿಂದ ತೊಳೆದರೂ ಕಪ್ಪು ಬಣ್ಣ ಕಡಿಮೆಯಾಗದಿರುವುದು.

★ **ಆಂತರಿಕ ವ್ಯತ್ಯಾಸಗಳು:** ಈ ಸಮಸ್ಯೆಯ ಜೊತೆಗೆ ಇದ್ದಕ್ಕಿದ್ದಂತೆ ತೂಕ ಹೆಚ್ಚಾಗುವುದು, ಅತಿಯಾದ ಆಯಾಸ, ನಿದ್ರಾಹೀನತೆ ಮತ್ತು ವಿಪರೀತ ಬೆವರುವುದು ಕಂಡುಬಂದರೆ ಅದು ಹಾರ್ಮೋನ್ ಅಸಮತೋಲನ ಅಥವಾ ಮೆಟಾಬಾಲಿಸಂ (ಚಯಾಪಚಯ) ಸಮಸ್ಯೆಯ ಸ್ಪಷ್ಟ ಮುನ್ಸೂಚನೆಯಾಗಿದೆ.

**ಕುತ್ತಿಗೆ ಕಪ್ಪಾಗಲು ಪ್ರಮುಖ ಕಾರಣಗಳು**

ಕುತ್ತಿಗೆಯ ಭಾಗ ಕಪ್ಪಾಗಲು ಹಲವು ಆಂತರಿಕ ಹಾಗೂ ಬಾಹ್ಯ ಕಾರಣಗಳಿವೆ:

★ **ಆಂತರಿಕ ಆರೋಗ್ಯ ಸಮಸ್ಯೆಗಳು:** ಹಾರ್ಮೋನ್ ಅಸಮತೋಲನ (ಉದಾಹರಣೆಗೆ ಥೈರಾಯ್ಡ್, ಇನ್ಸುಲಿನ್ ರೆಸಿಸ್ಟೆನ್ಸ್), ದೇಹದಲ್ಲಿ ಪೋಷಕಾಂಶಗಳ ಕೊರತೆ ಮತ್ತು ಅನುವಂಶಿಕ ಕಾರಣಗಳು.

★ **ಜೀವನಶೈಲಿ ಮತ್ತು ಆಹಾರ ಕ್ರಮ:** ಸರಿಯಾದ ನಿದ್ರೆ ಇಲ್ಲದಿರುವುದು, ನಿಯಂತ್ರಣವಿಲ್ಲದ ಮಾನಸಿಕ ಒತ್ತಡ, ಪೌಷ್ಟಿಕಾಂಶವಿಲ್ಲದ ಆಹಾರ ಮತ್ತು ಅಸ್ವಸ್ಥ ಜೀವನಶೈಲಿ.

★ **ಬಾಹ್ಯ ಅಪಥ್ಯಗಳು:** ಚರ್ಮದ ಮೇಲೆ ಹೆಚ್ಚು ರಾಸಾಯನಿಕಯುಕ್ತ ಸೌಂದರ್ಯ ವರ್ಧಕಗಳ ಬಳಕೆ, ಸೂರ್ಯನ ನೇರಳಾತೀತ ಕಿರಣಗಳಿಗೆ ಅತಿಯಾಗಿ ಒಡ್ಡಿಕೊಳ್ಳುವುದು, ಧೂಳು-ಕೊಳಕು ಸಂಗ್ರಹ ಹಾಗೂ ಸರಿಯಾದ ನೈರ್ಮಲ್ಯ ಪಾಲಿಸದಿರುವುದು.

**ಸಮಸ್ಯೆಯಿಂದ ಮುಕ್ತಿ ಪಡೆಯಲು ಕೈಗೊಳ್ಳಬೇಕಾದ ತಡೆಗಟ್ಟುವ ಕ್ರಮಗಳು**

ನಿತ್ಯ ಜೀವನದಲ್ಲಿ ಕೆಲವು ಸಣ್ಣ ಹಾಗೂ ಸರಳ ಬದಲಾವಣೆಗಳನ್ನು ಮಾಡಿಕೊಳ್ಳುವುದರಿಂದ ಈ ಸಮಸ್ಯೆಯನ್ನು ನಿವಾರಿಸಬಹುದು:

★ **ಸರಿಯಾದ ಚರ್ಮದ ಆರೈಕೆ:** ಪ್ರತಿದಿನ ಕುತ್ತಿಗೆ ಮತ್ತು ಗಲ್ಲದ ಭಾಗವನ್ನು ಸರಿಯಾಗಿ ಸ್ವಚ್ಛಗೊಳಿಸಿ. ಹೊರಗೆ ಹೋಗುವ ಮುನ್ನ ಕಡ್ಡಾಯವಾಗಿ ಸನ್ ಸ್ಕ್ರೀನ್ ಬಳಸಿ.

★ **ಆರೋಗ್ಯಕರ ಆಹಾರ ಪದ್ಧತಿ:** ದಿನನಿತ್ಯದ ಆಹಾರದಲ್ಲಿ ತಾಜಾ ಹಣ್ಣುಗಳು, ತರಕಾರಿಗಳನ್ನು ಸೇರಿಸಿ ಹಾಗೂ ದೇಹದಲ್ಲಿ ನೀರಿನಂಶ ಕಡಿಮೆಯಾಗದಂತೆ ಸಾಕಷ್ಟು ನೀರು ಕುಡಿಯಿರಿ.

★ **ಉತ್ಪನ್ನಗಳ ಎಚ್ಚರಿಕೆಯ ಬಳಕೆ:** ಕೇವಲ ನಿಮ್ಮ ಚರ್ಮದ ಪ್ರಕಾರಕ್ಕೆ ಹೊಂದುವ, ಕನಿಷ್ಠ ರಾಸಾಯನಿಕವಿರುವ ಸಾಫ್ಟ್ ಉತ್ಪನ್ನಗಳನ್ನು ಬಳಸಿ.

★ **ಆರೋಗ್ಯಕರ ಜೀವನಶೈಲಿ:** ಒತ್ತಡ ನಿರ್ವಹಣೆ ಮಾಡಿ ಹಾಗೂ ಪ್ರತಿದಿನ 6-7 ಗಂಟೆಗಳ ಕಾಲ ಸರಿಯಾದ ನಿದ್ರೆ ಮಾಡಿ.

ನೆನಪಿರಲಿ: ಕುತ್ತಿಗೆಯ ಭಾಗದಲ್ಲಿ ಕಪ್ಪಾಗುವಿಕೆ ಮುಂದುವರಿದರೆ ಅಥವಾ ದಿಢೀರನೆ ಹೆಚ್ಚಾದರೆ ಮನೆಮದ್ದು ಅಥವಾ ಸ್ವಯಂ ಚಿಕಿತ್ಸೆ ಮಾಡಿಕೊಳ್ಳುವ ಬದಲು, ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ ಸೂಕ್ತ ತಪಾಸಣೆ ಮಾಡಿಸಿಕೊಳ್ಳುವುದು ಒಳಿತು. ಆರಂಭದಲ್ಲೇ ಎಚ್ಚೆತ್ತುಕೊಂಡರೆ ಗಂಭೀರ ಆರೋಗ್ಯ ಸಮಸ್ಯೆಗಳನ್ನು ತಪ್ಪಿಸಬಹುದು.

**- ಕೆ.ಪಿ.ಅಶ್ವಿನ್ ರಾವ್**

## ಪ್ರೀತಿಗೆ ಕಾರಣವೇ?

ಹುಡುಗಿ: ನೀನೇಕೆ ನನ್ನನ್ನು ಇಷ್ಟಪಟ್ಟೆ? ನೀನೇಕೆ ನನ್ನ ಪ್ರೀತಿಸಿದೆ?

ಹುಡುಗ: ಕಾರಣ ಹೇಳಲಾರೆ ಆದ್ರೂ, ನಾನು ನಿನ್ನನ್ನು ನಿಜವಾಗಿ ಇಷ್ಟಪಟ್ಟಿದ್ದೀನಿ.

ಹುಡುಗಿ: ನಿಂಗೆ ಕಾರಣ ಕೂಡ ಹೇಳಕ್ಕಾಗಲ್ವ? ಮತ್ತೆ ನನ್ನನ್ನು ಇಷ್ಟಪಟ್ಟಿದ್ದೀ ಅಂತ ಅಷ್ಟು ಖಚಿತವಾಗಿ ಹೇಗೆ ಹೇಳ್ತೀ? ನನ್ನ ಪ್ರೀತಿಸ್ತೀ ಅಂತಾನೂ ಹ್ಯಾಗೆ ಹೇಳ್ತೀ?

ಹುಡುಗ: ನಿಜಕ್ಕೂ ನಂಗೆ ಕಾರಣ ಗೊತ್ತಿಲ್ಲ. ಆದ್ರೂ ನಿನ್ನ ಪ್ರೀತಿಸ್ತೀನಿ ಅಂತ ಸಾಬೀತು ಮಾಡಬಲ್ಲೆ.

ಹುಡುಗಿ: ಸಾಬೀತು ಮಾಡ್ತೀಯಾ? ಇಲ್ಲ. ನೀನು ಕಾರಣ ಹೇಳಲೇಬೇಕು. ನನ್ನ ಗೆಳತಿಗೆ ಆಕೆಯ ಬಾಯ್‌ಫ್ರೆಂಡ್ ಕಾರಣ ಹೇಳಬಹುದಾದರೆ, ನಿನಗೇಕೆ ಸಾಧ್ಯವಿಲ್ಲ?

ಹುಡುಗ: ಓಕೆ, ಓಕೆಹ್‌ಮ್. ನೀನು ಚಂದವಾಗಿದ್ದೀ. ನಿನ್ನ ಮಾತು ಹಿತವಾಗುತ್ತೆ, ನಿನ್ನ ಧ್ವನಿ ಸಂಗೀತದಂತಿದೆ, ನೀನು ತುಂಬಾ ಕೇರಿಂಗ್ ಆಗಿದ್ದೀ. ನೀನು ನನ್ನ ಚೆನ್ನಾಗಿ ಪ್ರೀತಿಸ್ತೀ. ನೀನು ಚೆನ್ನಾಗಿ ಯೋಚನೆ ಮಾಡ್ತೀ. ನಿನ್ನ ನಗೆ ನನಗೆ ಮೋಡಿ ಮಾಡಿದೆ. ಒಟ್‌ನಲ್ಲಿ, ನಿನ್ನೆಲ್ಲಾ ಚಟುವಟಿಕೆ, ಚಲನವಲನಗಳು ನನಗೆ ಇಷ್ಟವಾದವು.

ದುರದೃಷ್ಟಕರವೋ ಎಂಬಂತೆ ಕೆಲವು ದಿನಗಳಲ್ಲಿ ಈ ಹುಡುಗಿಗೆ ಅಪಘಾತವಾಗುತ್ತದೆ. ಜೀವಚ್ಛವದಂತೆ ಬದುಕಬೇಕಾಗುತ್ತದೆ. ಇದೇ ಹುಡುಗ ಆಕೆಯ ಬಳಿ ಒಂದು ಪತ್ರವನ್ನಿಡುತ್ತಾನೆ.

ಅದರಲ್ಲಿ ಈ ರೀತಿ ಬರೆದಿತ್ತು:

ಡಿಯರ್,

ನಿನ್ನ ಸಿಹಿಯಾದ ಮಾತಿಗಾಗಿ ನಾನು ನಿನ್ನ ಪ್ರೀತ್ಸಿದೆ ಆದ್ರೆ ಈಗ ನಿನಗೆ ಮಾತನಾಡಲಾಗುತ್ತದೆಯೇ? ಇಲ್ಲ! ಅದಕ್ಕಾಗಿ ನಾನು ನಿನ್ನ ಪ್ರೀತಿಸೋದಿಲ್ಲ.

ನಿನ್ನ ಕೇರಿಂಗ್ ನೇಚರ್, ಸೌಂದರ್ಯಕ್ಕಾಗಿ ನಾನು ನಿನ್ನ ಪ್ರೀತ್ಸಿದೆ ಈಗ ಅವೆಲ್ಲಾ ಎಲ್ಲಿ? ಸೋ ಈ ಕಾರಣದಿಂದ ನಿನ್ನ ಪ್ರೀತ್ಸೋದು ಅಸಾಧ್ಯ.

ನಿನ್ನ ಆ ಸುಂದರ ಹೂನಗೆ, ನಿನ್ನೆಲ್ಲಾ ಚಟುವಟಿಕೆಗಳು ನನಗೆ ಆತ್ಮೀಯವಾಗಿದ್ದರಿಂದ ನಿನ್ನ ಪ್ರೀತ್ಸಿದೆ. ಅವೆಲ್ಲಾ ಗುಣಗಳು ಈಗ ಸಾಧ್ಯವಿಲ್ಲ. ಆದುದರಿಂದ ಆ ಕಾರಣಗಳಿಗಾಗಿ ನಾ ನಿನ್ನ ಪ್ರೀತಿಸಲಾರೆ..

ಪ್ರೀತಿ ಮಾಡಲು ಕಾರಣಗಳು ಬೇಕೂಂತೇನಾದರೂ ಇದ್ರೆ, ಈಗಿನ ಸ್ಥಿತಿಯ ಪ್ರಕಾರ, ನಿನ್ನನ್ನು ಪ್ರೀತಿಸಲು ಯಾವುದೇ ಕಾರಣಗಳು ಉಳಿದಿಲ್ಲ. ಪ್ರೀತಿಗೆ ಕಾರಣ ಎಂಬುದೇನಾದರೂ ಬೇಕೇ? ಇಲ್ಲ. ಹೌದು. ನಾನಿನ್ನೂ ನಿನ್ನ ಪ್ರೀತಿಸ್ತಿದೀನಿ. ಪ್ರೇಮಕ್ಕೆ ಕಾರಣ ಬೇಕಿಲ್ಲ. ಐ ಲವ್ ಯು.



# ಗೆಲುವಿನ ಹಳಿಗೆ ಮರಳಲು ಭಾರತ ತವಕ

## ಇಂದಿನಿಂದ ಭಾರತ-ಜಿಂಬಾಬ್ವೆ ನಡುವಿನ ಮೂರು ಟಿ-20 ಪಂದ್ಯಗಳ ಸರಣಿ ಆರಂಭ

• ಪ್ರಜೋದಯ ವರದಿ




**ಹರಾರೆ:** ಶ್ರೇಯಸ್ ಅಯ್ಯರ್ ಅವರು ಭಾರತ ಟಿ-20 ತಂಡದ ನಾಯಕತ್ವ ವಹಿಸಿಕೊಂಡ ಮೇಲೆ ಮೊದಲ ಗೆಲುವು ಪಡೆಯಲು ತವಕ ದಿಂದಿದ್ದಾರೆ. ಕೆಚ್ಚೆದೆಯ ಆಟವಾಡಬಲ್ಲ ಜಿಂಬಾಬ್ವೆ ವಿರುದ್ಧ ಗುರುವಾರ ಆರಂಭವಾಗುವ ಮೂರು ಪಂದ್ಯಗಳ ಟಿ-20 ಸರಣಿಯಲ್ಲಿ ಯುವ ಆಟಗಾರರೂ ಲಯ ಕಂಡುಕೊಳ್ಳಲು ಕಾತರದಲ್ಲಿದ್ದಾರೆ.

ಅಯ್ಯರ್ ಸಾರಥ್ಯ ವಹಿಸಿದ ನಂತರ ಭಾರತ ತಂಡ ಐರ್ಲೆಂಡ್ ವಿರುದ್ಧ (ಎರಡು) ಮತ್ತು ಇಂಗ್ಲೆಂಡ್ ವಿರುದ್ಧ (ಐದು) ಆಡಿರುವ ಒಟ್ಟು ಏಳು ಟಿ-20 ಪಂದ್ಯಗಳಲ್ಲಿ ಆರನ್ನು ಸೋತಿದೆ. ಇಂಗ್ಲೆಂಡ್ ವಿರುದ್ಧ ಒಂದು ಪಂದ್ಯ ಮಳೆಗೆ ಕೊಚ್ಚಿಹೋಗಿತ್ತು. ಹೀಗಾಗಿ ಅಯ್ಯರ್ ಅವರಿಗೆ ತಂಡವನ್ನು ಗೆಲುವಿನ ಹಳಿಗೆ ಕರೆದೊಯ್ಯಲು ಈ ಸರಣಿ ಅವಕಾಶ ಕಲ್ಪಿಸಿದೆ. ಭಾರತ ತಂಡವು ಈ ಸರಣಿ ಗೆದ್ದರೆ ಅದೇನೂ ಅನಿರೀಕ್ಷಿತವೆನಿಸದು. ಆದರೆ ಸೋತರೆ ಅದು ಈ ಯುವೋತ್ಸಾಹದ ತಂಡವನ್ನು ಇನ್ನಷ್ಟು ಒತ್ತಡಕ್ಕೆ ಸಿಲುಕಿಸಬಹುದು.

ಈ ಪ್ರವಾಸದ ಮಟ್ಟಿಗೆ ವಿ.ವಿ.ಎಸ್.ಲಕ್ಷ್ಮಣ್ ಅವರು ತಂಡಕ್ಕೆ ಹೆಡ್ ಕೋಚ್ ಆಗಿದ್ದಾರೆ. ಗೌತಮ್ ಗಂಭೀರ್ ಮತ್ತು ಲಕ್ಷ್ಮಣ್ ಅವರ ಮನೋಭಾವ ಭಿನ್ನಸ್ವರೂಪದ್ದು. ಆಕ್ರಮಣಕಾರಿ ಆಟದ ಪ್ರತಿಪಾದಕರಾದ ಗಂಭೀರ್ ಆಡುವ 11ರಲ್ಲಿ ಬದಲಾವಣೆಗಳನ್ನು ಮಾಡುತ್ತ ಇರುವವರು. ಆದರೆ ಆ ಪ್ರಮಾಣದಲ್ಲಿ ಪ್ರಯೋಗಗಳಿಗೆ ಲಕ್ಷ್ಮಣ್ ಮುಂದಾಗುವವರಲ್ಲ.

**ವೈಭವ್ ಮೇಲೆ ಕಣ್ಣು**

ನಿರ್ಭೀತ ಬೀಸಾಟದಿಂದ ಬೇಗನೇ ತಂಡಕ್ಕೆ ಲಗ್ಗೆಯಿಟ್ಟಿರುವ ಬಾಯ್ ವಂಡರ್ ವೈಭವ್ ಸೂರ್ಯವಂಶಿ ಮೂರೂ ಪಂದ್ಯಗಳಲ್ಲಿ ಅಭಿಷೇಕ್ ಶರ್ಮಾ ಜೊತೆ ಇನಿಂಗ್ಸ್ ಆರಂಭಿಸಲು ಸಜ್ಜಾಗಿದ್ದಾರೆ. ಈ ಪ್ರವಾಸಕ್ಕೆ ಸಂಜು ಸ್ಯಾಮ್ಸನ್ ಆಯ್ಕೆಯಾಗಿಲ್ಲ.

ಅಭಿಷೇಕ್ ಮತ್ತು 15 ವರ್ಷ ವಯಸ್ಸಿನ ಸೂರ್ಯವಂಶಿ ಅವರಿಗೆ ಇಲ್ಲಿ ಸವಿನೆನಪುಗಳಿವೆ. ಅಭಿಷೇಕ್ ಅವರು ಹರಾರೆ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಪದಾರ್ಪಣೆ ಮಾಡಿದ್ದರು. ಎರಡನೇ ಪಂದ್ಯದಲ್ಲೇ ತಮ್ಮ ಮೊದಲ ಟಿ-20 ಶತಕ ಬಾರಿಸಿ ದ್ದರು. ಈ ವರ್ಷದ ಫೆಬ್ರುವರಿ ಯಲ್ಲಿ ಜೂನಿಯರ್ ವಿಶ್ವಕಪ್ ಫೈನಲ್‌ನಲ್ಲಿ ಇಂಗ್ಲೆಂಡ್ ದಾಳಿ ಯನ್ನು ನೆಲಸಮ ಮಾಡಿದ್ದ ಸೂರ್ಯ ವಂಶಿ ಭರ್ಜರಿ ಶತಕ (175, 80 ಎಸೆತ) ಗಳಿಸಿ ಭಾರತದ ಗೆಲುವಿಗೆ ಕಾರಣರಾಗಿದ್ದರು. ಇತ್ತೀಚಿನ ಸತತ ಹಿನ್ನಡೆಯಿಂದ ತಂಡ ಒತ್ತಡದಲ್ಲಿರುವ ಕಾರಣ ಮೊದಲ ಪಂದ್ಯದಲ್ಲಿ ಭಾರತ ಪ್ರಯೋಗಕ್ಕೆ ಕೈಹಾಕುವ ಸಾಧ್ಯತೆಯಿಲ್ಲ.

ಜಿಂಬಾಬ್ವೆಯ ಇಬ್ಬರು ಎತ್ತರದ ವೇಗಿಗಳಾದ ಬ್ಲೆಸಿಂಗ್ ಮುಝುರಾಬಾನಿ ಮತ್ತು ರಿಚರ್ಡ್ ಎನ್ಗವಾರ ಅವರು ಭಾರತಕ್ಕೆ ಸವಾಲೊಡ್ಡಬಲ್ಲರು. ಹೀಗಾಗಿ ಲಕ್ಷ್ಮಣ್ ಅವರ ತಂತ್ರಗಾರಿಕೆ ಕುತೂಹಲ ಮೂಡಿಸಿದೆ.

ತಿಲಕ್ ವರ್ಮಾ ಐದನೇ ಕ್ರಮಾಂಕದಲ್ಲಿ ಅಷ್ಟೇನೂ ಯಶ ಕಂಡಿಲ್ಲ. ಅವರು ಆಡುವ ಮೂರನೇ ಕ್ರಮಾಂಕದಲ್ಲಿ ಅನುಭವಿ ಇಶಾನ್ ಕಿಶನ್ ಬೇರೂರಿದ್ದಾರೆ. ಐದನೇ ಕ್ರಮಾಂಕಕ್ಕೆ ರಿಂಕು ಸಿಂಗ್ ಕೂಡ ಸೂಕ್ತವಾಗಬಲ್ಲರು. ಆದರೆ ಉಪನಾಯಕನ (ತಿಲಕ್ ವರ್ಮಾ) ಕ್ರಮಾಂಕದಲ್ಲಿ ಅವರು ಆಡುವ ಸಾಧ್ಯತೆಯಿಲ್ಲ.

ಹರ್ಷ ದುಬೆ, ಶಿವಂ ದುಬೆ, ಸೂರ್ಯಾಂಶ್ ಶೆಡ್ಗೆ ಅವರಲ್ಲಿ ಇಬ್ಬರನ್ನು ಆರಿಸುವುದೂ ಸವಾಲು. ಮೂವರೂ ಪರಿಣತ ಆಲ್‌ರೌಂಡರ್‌ಗಳಲ್ಲ. ಗಂಭೀರ್ ಆಲ್‌ರೌಂಡರ್‌ಗಳಿಗೆ ಆದ್ಯತೆ ನೀಡುವವರು. ಆದರೆ ಲಕ್ಷ್ಮಣ್ ಆದ್ಯತೆ ಭಿನ್ನವಾದುದು.

ವೇಗಿಗಳಾದ ಮಯಂಕ್ ಯಾದವ್, ಅಶೋಕ್ ಶರ್ಮಾ, ಪ್ರಿನ್ಸ್ ಯಾದವ್ ಮತ್ತು ಯಶ್ ಠಾಕೂರ್ ಅವರು ಉಪಯುಕ್ತ ಬ್ಯಾಟರ್‌ಗಳಲ್ಲ. ಅಶೋಕ್ ಮತ್ತು ಯಶ್ ಅವರಲ್ಲಿ ಒಬ್ಬರಷ್ಟೇ ಅವಕಾಶ ಪಡೆಯಬಹುದು.

ತಂಡಗಳು ಹೀಗಿವೆ

ಭಾರತ: ಶ್ರೇಯಸ್ ಅಯ್ಯರ್ (ನಾಯಕ), ವೈಭವ್ ಸೂರ್ಯವಂಶಿ, ಅಭಿಷೇಕ್ ಶರ್ಮಾ, ಇಶಾನ್ ಕಿಶನ್ (ವಿಕೆಟ್ ಕೀಪರ್), ತಿಲಕ್ ವರ್ಮಾ, ಶಿವಂ ದುಬೆ, ಹರ್ಷ ದುಬೆ, ಸೂರ್ಯಾಂಶ್ ಶೆಡ್ಗೆ, ಯಶ್ ಠಾಕೂರ್, ಪ್ರಿನ್ಸ್ ಯಾದವ್, ಮಯಂಕ್ ಯಾದವ್, ಅಶೋಕ್ ಶರ್ಮಾ, ರವಿ ಬಿಷ್ಣೋಯಿ, ಪ್ರಭಸಿಮ್ರನ್ ಸಿಂಗ್, ರಿಂಕು ಸಿಂಗ್.

ಜಿಂಬಾಬ್ವೆ: ಸಿಕಂದರ್ ರಝಾ (ನಾಯಕ), ಬ್ರಿಯಾನ್ ಬೆನೆಟ್, ರಯಾನ್ ಬರ್ಲ್, ತನಾಕ ಚಿವಾಂಗ, ಬೆನ್ ಕರನ್, ಬ್ರಾಡ್ ಇವಾನ್ಸ್, ವೆಸ್ಲಿ ಮಧೆವೆರೆ, ತಸಿವನಾಶೆ ಮರುಮಣಿ, ವೆಲ್ಲಿಂಗ್ಟನ್ ಮಸಕದ್ಜಾ, ಬ್ಲೆಸಿಂಗ್ ಮುಝುರಾಬಾನಿ, ಡಿಯಾನ್ ಮೈರ್ಸ್, ರಿಚರ್ಡ್ ಎನ್ಗವಾರ, ನೆವ್‌ಮನ್ ನ್ಯಾಮ್‌ಹುರಿ, ಮಿಲ್ಟನ್ ಶುಂಬಾ, ತಫದ್ಜ್ವಾ ಸಿಗಾ.

**ಪಂದ್ಯ ಆರಂಭ: ಸಂಜೆ 4.30.**

# ಶ್ರೀಮತಿ ಚನ್ನಮ್ಮನವರಿಗೆ ಹಾಲು-ತುಪ್ಪ ಸಮರ್ಪಣೆ

» ಮೊದಲನೇ ಪುಟದಿಂದ

**ಗಾಢ ಮೌನದಲ್ಲಿ ಗೌಡರು**



ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಬೆಳಿಗ್ಗೆಯಿಂದಲೂ ಗಾಢ ಮೌನದಲ್ಲೇ ಇದ್ದರು. ಪತ್ನಿಯ ಸಮಾಧಿ ಬಳಿಯೇ ವೀಲ್ ಚೇರ್‌ನಲ್ಲಿ ಕುಳಿತಿದ್ದ ಅವರು ಯಾರೊಂದಿಗೂ ಏನನ್ನೂ ಮಾತನಾಡದೇ ಸಮಾಧಿಯತ್ತ ದೃಷ್ಟಿ ಹರಿಸಿ ಕುಳಿತ್ತಿದ್ದರು. ಪೂಜೆ ಪುನಸ್ಕಾರ ಬಳಿಕ ದೇವೇಗೌಡರ ಪುತ್ರಿ ಅನುಸೂಯ ಅವರು ತಮ್ಮ ಮೊಮ್ಮಗಳಿಂದ ಹಾಲು ತುಪ್ಪ ಬಿಟ್ಟ ಬಳಿಕ, ಇವಳೇ ಅಮ್ಮನಿಗೆ ಊಟ ಕೊಟ್ಟು ನೋಡಿ ಕೊಳ್ಳುತ್ತಿದ್ದಳು ಎಂದಾಗ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರಗಳಗಳನೆ ಅತ್ತುಬಿಟ್ಟರು.

ಶ್ರೀಮತಿ ಚನ್ನಮ್ಮ ಅವರ ಪುತ್ರಿ ಅನುಸೂಯ ಅವರು ಮಾತನಾಡಿ, ಅಂತ್ಯಕ್ರಿಯೆಯಾದ ಮೂರನೇ ದಿನ ಹಾಲು ತುಪ್ಪ ಬಿಡುವುದು ನಮ್ಮ ಸಂಪ್ರದಾಯ. ಎಲ್ಲಾ ಪ್ರೀತಿ ಪಾತ್ರರು ಆಗಮಿಸಿ ಶ್ರದ್ಧಾ ಭಕ್ತಿಯಿಂದ ಹಾಲು ತುಪ್ಪ ಬಿಟ್ಟು ಅಮ್ಮನವರ ಸದ್ಗತಿಗೆ ಪ್ರಾರ್ಥಿಸಿದ್ದಾರೆ. ಅಮ್ಮನಿಗೆ ಮೈಸೂರು ಪಾಕ್ ಹಾಗು ಚಕ್ಕುಲಿ ಇಷ್ಟವಾದ್ದರಿಂದ ಅದನ್ನು ಮನೆಯಲ್ಲೇ ತಯಾರಿಸಿ ಮನಸ್ಸು ಪೂರ್ವಕವಾಗಿ ಸಮರ್ಪಿಸಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂಬ ಉದ್ದೇಶದಿಂದ 11 ದಿನಗಳವರೆಗೆ ಪಾರಾಯಣ ಹಾಗು ವಿಷ್ಣು ಸಹಸ್ರನಾಮ ನೆರವೇರಲಿದೆ. ಸುಸೂತ್ರವಾಗಿ ಎಲ್ಲಾ ಕಾರ್ಯ ಮಾಡಿದ್ದೇವೆಂದರು.

**ವಿಶ್ವಕ್ಕೆ ಮಾದರಿಯಾಗುವ ಧಾರ್ಮಿಕ ಸ್ಥಳವಾಗಿ ನಿರ್ಮಾಣ**

» ಮೊದಲನೇ ಪುಟದಿಂದ

ನಮ್ಮ ತಂದೆಯವರು ಇನ್ನೂ ಏಳೆಂಟು ವರ್ಷ ಇರುತ್ತಾರೆಂದು ಅಂದುಕೊಂಡಿದ್ದೇವೆ. ನಮ್ಮ ತಾಯಿಯ ಜೊತೆ ಅವರು ಆತ್ಮೀಯ ಭಾವನೆ ಇಟ್ಟುಕೊಂಡಿದ್ದರು. ಆ ಕೊರಗಿನಲ್ಲಿ ಏನಾದರೂ ಸಣ್ಣಪುಟ್ಟ ಸಮಸ್ಯೆಗಳು ಆಗಬಹುದೆನ್ನುವ ಭಯವಿದೆ. ಆದ್ದರಿಂದ ಅವರಿಗೆ ಮಾನಸಿಕವಾಗಿ ಧೈರ್ಯ ತುಂಬಲು ಕುಟುಂಬದವರು ಇರಬೇಕೆಂದು ತೀರ್ಮಾನಿಸಲಾಗಿದೆ.

**ಕುಟುಂಬದ ಹಸ್ತಕ್ಷೇಪ ಇಲ್ಲ**

ಕುಟುಂಬದವರು, ನಮ್ಮ ತಂದೆಯವರ ಜೊತೆ ಚರ್ಚೆ ಮಾಡಿ ಈ ಸ್ಥಳವನ್ನು ಧಾರ್ಮಿಕ ಕ್ಷೇತ್ರವಾಗಿ ನಿರ್ಮಾಣ ಮಾಡುತ್ತೇವೆ. ಇದರಲ್ಲಿ ನಮ್ಮ ಕುಟುಂಬದ ಹಸ್ತಕ್ಷೇಪ ಇರುವುದಿಲ್ಲ. ವಯೋವೃದ್ಧರಿಗೆ, ಅನಾಥ ಮಕ್ಕಳಿಗೆ, ರೈತರು ಸಂಶೋಧನೆ ಮಾಡುವ ಕೇಂದ್ರ, ಸಂಸ್ಕೃತ ಪಾಠಶಾಲೆ ನಿರ್ಮಾಣ ಸೇರಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದೇವೆಂದರು. ಸ್ವಾರ್ಥವಿಲ್ಲದೆ ಧಾರ್ಮಿಕವಾಗಿ, ಸಾಮಾಜಿಕವಾಗಿ ಕೆಲಸ ಮಾಡುವವರನ್ನು ಆಯ್ಕೆ ಮಾಡಲಾಗುವುದು. ಈ ಭೂಮಿ ಇರುವವರೆಗೂ, ಶಾಶ್ವತವಾಗಿ ನೆಲೆಸಿ ನಮ್ಮ ತಂದೆ-ತಾಯಿ ಹೆಸರಿನಲ್ಲಿ ಬಡವರು, ಅನಾಥರಿಗೆ ನೆರಳಾಗುವ, ಬದುಕಿಗೆ ದಾರಿ ತೋರಿಸುವ ಯೋಜನೆ ಗಳನ್ನು ಇಲ್ಲಿ ಮಾಡಲು ನೀಲಿ ನಕ್ಷೆ ತಯಾರುಮಾಡಿ ಇಟ್ಟಿದ್ದೇನೆ. ಮುಂದಿನ 15 ರಿಂದ 20 ದಿನಗಳಲ್ಲಿ ಕಾಮಗಾರಿ ಆರಂಭಿಸಿ ಮುಂದಿನ 3 ವರ್ಷಗಳಲ್ಲಿ ಪೂರ್ಣಗೊಳಿಸುವ ಗುರಿ ಹಾಕಿಕೊಂಡಿದ್ದೇವೆಂದರು.

---

# ಅಂತರ್ರಾಷ್ಟ್ರೀಯ ಮಟ್ಟದ ಕಾಫಿ ಉತ್ಪಾದನೆಗೆ ಆದ್ಯತೆ

» ಮೊದಲನೇ ಪುಟದಿಂದ

ಕಾಫಿ ಮಂಡಳಿಯ ಹಿರಿಯ ಸಂಪರ್ಕಾಧಿಕಾರಿ ಡಾ. ರಂಜಿತ್ ಕುಮಾರ್ ಅವರು, ಸೆಂಟರ್ ಆಫ್ ಎಕ್ಸಲೆನ್ಸ್ ಪ್ರಯೋಗಾಲಯದಲ್ಲಿ ಲಭ್ಯವಿರುವ ಮಣ್ಣು, ನೀರು ಹಾಗು ಕಾಫಿ ಮಾದರಿಗಳ ಪರೀಕ್ಷೆ ಸೇರಿ ವಿವಿಧ ತಾಂತ್ರಿಕ ಸೇವೆಗಳ ಬಗ್ಗೆ ಬೆಳೆಗಾರರಿಗೆ ಮಾಹಿತಿ ನೀಡಿದರು. ಬಳಿಕ ಎನ್.ಕೆ.ಜಿ. ಕಾಫಿ ಕ್ಯೂರಿಂಗ್ ವರ್ಕ್ಸ್‌ಗೆ ಭೇಟಿ ನೀಡಿ ಕಾಫಿ ಸಂಸ್ಕರಣೆ ಹಾಗು ರಫ್ತು ಪ್ರಕ್ರಿಯೆ ವೀಕ್ಷಿಸಲಾಯಿತು.

ಸಂಸ್ಥೆಯ ವ್ಯವಸ್ಥಾಪಕ ವಿನೋದ್ ಹಾಗು ನಿರ್ವಾಹಕ ದಿವ್ಯದರ್ಶನ್ ಅವರು ರಫ್ತು ಗುಣಮಟ್ಟದ ಕಾಫಿ ಉತ್ಪಾದನೆಯಲ್ಲಿ ಪಾಲಿಸಬೇಕಾದ ಮಾನದಂಡಗಳು, ರಾಸಾಯನಿಕ ಅವಶೇಷಗಳ ನಿಯಂತ್ರಣ ಹಾಗು ಅಂತಾರಾಷ್ಟ್ರೀಯ ಮಾರುಕಟ್ಟೆಯ ಬೇಡಿಕೆಗಳಿಗೆ ಅನುಗುಣವಾಗಿ ಬೆಳೆಗಾರರು ಅನುಸರಿಸಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಿದರು.

ಪ್ರಗತಿಪರ ಕಾಫಿ ಬೆಳೆಗಾರ ಹೆಚ್.ಎಸ್.ಧರ್ಮರಾಜ್ ಅವರು ಕಾಫಿ ಮಾರಾಟದ ಸಂದರ್ಭದಲ್ಲಿ ಬೆಳೆಗಾರರು ಪಾಲಿಸಬೇಕಾದ ಗುಣಮಟ್ಟದ ಕ್ರಮಗಳು ಹಾಗು ಮಾರುಕಟ್ಟೆ ನಿರ್ವಹಣೆಯ ಕುರಿತು ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ಕಾಫಿ ಬೆಳೆಗಾರರಿಗೆ ಆಧುನಿಕ ಕೃಷಿ ತಂತ್ರಜ್ಞಾನ, ಗುಣಮಟ್ಟದ ಉತ್ಪಾದನೆ, ವೈಜ್ಞಾನಿಕ ಸಂಸ್ಕರಣೆ ಹಾಗು ರಫ್ತು ಅವಕಾಶಗಳ ಕುರಿತು ಸಮಗ್ರ ಮಾಹಿತಿ ನೀಡಯಿತು.

ಕಸಬಾ ಹೋಬಳಿ ಬೆಳೆಗಾರರ ಸಂಘದ ಅಧ್ಯಕ್ಷ ಕೆ.ವಿ.ಮೇಘರಾಜ್, ಗೌರವ ಕಾರ್ಯದರ್ಶಿ ಎನ್.ಡಿ. ರಾಕೇಶ್, ಸಂಘದ ಪದಾಧಿಕಾರಿಗಳು, ನಿರ್ದೇಶಕರು ಹಾಗು ಕಾಫಿ ಬೆಳೆಗಾರರು ಭಾಗವಹಿಸಿದ್ದರು.

# ತಮಿಳುನಾಡಿಗೆ ಸದ್ಯಕ್ಕಿಲ್ಲ ಕಾವೇರಿ ನೀರು

## ಯಥಾಸ್ಥಿತಿ ಕಾಯ್ದುಕೊಳ್ಳಲು ಕಾವೇರಿ ನೀರು ನಿರ್ವಹಣಾ ಮಂಡಳಿ ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ಕಾವೇರಿ ನೀರನ್ನು ತಮಿಳು ನಾಡಿಗೆ ಬಿಡುವ ವಿಚಾರವಾಗಿ ಕಾವೇರಿ ನೀರು ನಿರ್ವಹಣಾ ಮಂಡಳಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯ ಕೊರತೆಯ ಸಾಧಕ ಬಾಧಕಗಳ ಚರ್ಚಿಸಿ ಯಥಾಸ್ಥಿತಿ ಕಾಯ್ದುಕೊಳ್ಳಲು ಮಂಡಳಿ ಸೂಚನೆ ನೀಡಿದೆ.

ಬುಧವಾರ ನವದೆಹಲಿಯಲ್ಲಿ ನಡೆದ ಪ್ರಾಧಿಕಾರದ 53ನೇ ಸಭೆಯಲ್ಲಿ ಎರಡೂ ರಾಜ್ಯಗಳ ವಾದ ಆಲಿಸಿದ ಬಳಿಕ, ಇನ್ನೂ ಒಂದು ವಾರ ಪರಿಸ್ಥಿತಿಯನ್ನು ಅವಲೋಕಿಸಿ ಜು.28ರಂದು ನಡೆಯಲಿರುವ ಕಾವೇರಿ ನೀರು ನಿಯಂತ್ರಣ ಸಮಿತಿ ಸಭೆಯಲ್ಲಿ ಮುಂದಿನ ನಿರ್ಧಾರ ಕೈಗೊಳ್ಳಲು ತೀರ್ಮಾನಿಸಲಾಗಿದೆ.



**ಜು.28ರಂದು ಅಂತಿಮ ನಿರ್ಧಾರ**

ಜು.26ರ ನಂತರ ಕಾವೇರಿ ಜಲಾನಯನ ಪ್ರದೇಶದಲ್ಲಿ ಸ್ವಲ್ಪ ಮಟ್ಟಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಸಭೆಯಲ್ಲಿ ತಿಳಿಸಲಾಯಿತು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ತಮಿಳು ನಾಡಿಗೆ ನೀರು ಬಿಡುಗಡೆ ಮಾಡುವಂತೆ ಯಾವುದೇ ನಿರ್ದೇಶನ ನೀಡದೆ ಪರಿಸ್ಥಿತಿಯನ್ನು ಮತ್ತೊಮ್ಮೆ ಪರಿಶೀಲಿಸಿ ಜುಲೈ 28ರಂದು ನಡೆಯಲಿರುವ ಕಾವೇರಿ ನೀರು ನಿಯಂತ್ರಣ ಸಮಿತಿ ಸಭೆಯಲ್ಲಿ ಪ್ರೋ-ರಾಟಾ ಆಧಾರದ ಮೇಲೆ ರಾಜ್ಯಗಳ ನೀರಿನ ಹಂಚಿಕೆ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲು ಪ್ರಾಧಿಕಾರ ತೀರ್ಮಾನಿಸಿದೆ.

ಸಭೆಯಲ್ಲಿ ತಮಿಳುನಾಡು ಸರ್ಕಾರ ತನ್ನ ಪಾಲಿನ ನೀರು ಸಿಗುತ್ತಿಲ್ಲ ಎಂದು ಪ್ರಬಲವಾಗಿ ವಾದ ಮಂಡಿಸಿತು. ಸುಪ್ರೀಂಕೋರ್ಟ್‌ನ 2018ರ ತೀರ್ಪಿನ ಪ್ರಕಾರ ಜೂನ್ 1ರಿಂದ ಜುಲೈ 19ರ ವರೆಗೆ ಬಿಲ್ಲಿಗುಂಡ್ಲುವಿಗೆ 28.3 ಟಿಎಂಸಿ ನೀರು ಹರಿಯಬೇಕಿದ್ದರೆ, ಕೇವಲ 3.4 ಟಿಎಂಸಿ ಮಾತ್ರ ಹರಿದುಬಂದಿದೆ ಎಂದು ತಿಳಿಸಿತು. ಅದರಿಂದ ಸುಮಾರು 24.8 ಟಿಎಂಸಿ ನೀರಿನ ಕೊರತೆ ಉಂಟಾಗಿದೆ ಎಂದು ಪ್ರಾಧಿಕಾರದ ಗಮನಕ್ಕೆ ತಂದಿದೆ.

ಇದೇ ವೇಳೆ, ಜುಲೈ 20ರ ವೇಳೆಗೆ ಕರ್ನಾಟಕದ ನಾಲ್ಕು ಪ್ರಮುಖ ಜಲಾಶಯಗಳಲ್ಲಿ 48.9 ಟಿಎಂಸಿ ನೀರು ಸಂಗ್ರಹವಿದ್ದರೂ, ಅವುಗಳಿಗೆ ಬಂದಿರುವ ಒಟ್ಟು ಒಳಹರಿವು ಕೇವಲ 31.6 ಟಿಎಂಸಿ ಮಾತ್ರವಾಗಿದೆ. ಇದು ಕಳೆದ 30 ವರ್ಷಗಳ ಸರಾಸರಿಯ ಶೇ.38.79ರಷ್ಟೇ ಎಂದು ತಮಿಳುನಾಡು ಉಲ್ಲೇಖಿಸಿತು.

ಮೆಟ್ಟೂರು ಜಲಾಶಯದಲ್ಲಿ 36.9 ಟಿಎಂಸಿ ನೀರಿದ್ದು, ಒಳಹರಿವು ಅತ್ಯಂತ ಕಡಿಮೆಯಾಗಿದೆ ಎಂದು ಹೇಳಿ, ಕರ್ನಾಟಕವು ಬಾಕಿ ನೀರನ್ನು ಪ್ರೋ-ರಾಟಾ ಆಧಾರದ ಮೇಲೆ ಬಿಡುಗಡೆ ಮಾಡುವಂತೆ ಪ್ರಾಧಿಕಾರ ನಿರ್ದೇಶಿಸಬೇಕೆಂದು ಮನವಿ ಮಾಡಿದೆ.

ಅದಕ್ಕೆ ಪ್ರತಿಯಾಗಿ ಕರ್ನಾಟಕದ ಪ್ರತಿನಿಧಿಗಳು ರಾಜ್ಯದಲ್ಲಿ ಮಳೆಯ ಕೊರತೆ ಹಾಗು ಬರದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ವಿಶೇಷವಾಗಿ ಬೆಂಗಳೂರು ಸೇರಿ ಕುಡಿಯುವ ನೀರಿನ ಅವಶ್ಯಕತೆಗಳಿಗೆ ಆದ್ಯತೆ ನೀಡಬೇಕಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯ ಪ್ರಮಾಣ ತೀರಾ ಕಡಿಮೆಯಿರುವ ಬಗ್ಗೆ ಆತಂಕ ವ್ಯಕ್ತವಾಯಿತು. ಮುಂದಿನ ದಿನಗಳಲ್ಲಿಯೂ ಭಾರೀ ಮಳೆಯಾಗುವ ಸಾಧ್ಯತೆ ಕಡಿಮೆ ಇರುವ ಹಿನ್ನಲೆ ಲಭ್ಯವಿರುವ ನೀರನ್ನು ಮಿತವಾಗಿ ಮತ್ತು ಕಾನೂನು ವ್ಯಾಪ್ತಿಯಲ್ಲಿಯೇ ಬಳಸುವಂತೆ ಎರಡೂ ರಾಜ್ಯಗಳಿಗೆ ಸೂಚನೆ ನೀಡಲಾಯಿತು. ಕೃಷಿಗಿಂತ ಕುಡಿಯುವ ನೀರಿನ ಅಗತ್ಯಕ್ಕೆ ಮೊದಲ ಆದ್ಯತೆ ನೀಡಬೇಕೆಂಬ ಅಭಿಪ್ರಾಯವೂ ವ್ಯಕ್ತವಾಯಿತು.

# ಇಂದಿನಿಂದ ಗುರುಪೂರ್ಣಿಮೆ ಮಹೋತ್ಸವ

• ಪ್ರಜೋದಯ ವರದಿ



**ಹಾಸನ:** ಗುರು-ಶಿಷ್ಯ ಪರಂಪರೆಯ ಮಹತ್ವವನ್ನು ಸಾರುವ ಗುರು ಪೂರ್ಣಿಮೆ ಮಹೋತ್ಸವವು ನಗರದ ಸಾಲಗಾಮೆ ರಸ್ತೆಯಲ್ಲಿರುವ ಶ್ರೀ ಶಿರಡಿ ಸಾಯಿ ಮಂದಿರದಲ್ಲಿ ಜು.23 ರಿಂದ 30ರ ವರೆಗೆ ವೈವಿಧ್ಯಮಯ ಧಾರ್ಮಿಕ ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಟ್ರಸ್ಟ್ ಕಾರ್ಯದರ್ಶಿ ಸಾಯಿ ಪ್ರಸಾದ್ ಅವರು ತಿಳಿಸಿದ್ದಾರೆ.

ಶಿರಡಿ ಸಾಯಿ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ ಆಯೋಜಿಸಿರುವ ಮಹೋತ್ಸವದಲ್ಲಿ ಪ್ರತಿದಿನ ವಿಶೇಷ ಪೂಜೆ, ಸಾಯಿ ಸಚ್ಚರಿತೆ ಪಾರಾಯಣ, ಭಜನಾ ಸೇವೆ, ಸಂಗೀತ, ಯಕ್ಷಗಾನ, ಹರಿಕಥೆ ಹಾಗು ಆಧ್ಯಾತ್ಮಿಕ ಉಪನ್ಯಾಸ ಕಾರ್ಯಕ್ರಮಗಳು ನಡೆಯಲಿವೆ.

ಜುಲೈ 23ರಿಂದ 29ರವರೆಗೆ ಪ್ರತಿದಿನ ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ಹೆಚ್.ಬಿ. ಚಂದ್ರಶೇಖರ್ ನೇತೃತ್ವದಲ್ಲಿ ಶ್ರೀ ಸಾಯಿ ಸಚ್ಚರಿತೆ ಪಾರಾಯಣ ನಡೆಯಲಿದೆ. ಪ್ರತಿದಿನ ಸಂಜೆ 4.30ರಿಂದ 6 ಗಂಟೆಯವರೆಗೆ ವಿವಿಧ ಭಜನಾ ಮಂಡಳಿಗಳಿಂದ ಭಜನಾ ಸೇವೆ ಆಯೋ ಜಿಸಲಾಗಿದೆ. ಮಂದಿರದಲ್ಲಿ ವಿಶೇಷ ಅಲಂಕಾರ, ದೀಪಾಲಂಕಾರ ಹಾಗು ಪೂಜಾ ಕೈಂಕರ್ಯಗಳಿಗೆ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗಿದೆ. ಸಂಜೆ 6.30ರಿಂದ 8.30ರವರೆಗೆ ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಮಾಹಿತಿ ನೀಡಿದರು.

ಗುರುಪೂರ್ಣಿಮೆಯ ದಿನವಾದ ಜು.29ರಂದು ವಿಶೇಷ ಪೂಜೆ, ಅಭಿಷೇಕ, ಗುರುಪಾದ ಪೂಜೆ, ಮಹಾ ಮಂಗಳಾರತಿ ಸೇರಿ ವಿವಿಧ ಧಾರ್ಮಿಕ ವಿಧಿವಿಧಾನಗಳು ನಡೆಯಲಿವೆ. ಭಕ್ತರು ಆಶೀರ್ವಾದ ಪಡೆಯಲಿದ್ದಾರೆ. ಪ್ರತಿದಿನ ಬೆಳಿಗ್ಗೆ ಕಾಕಡ ಆರತಿ, ಮಧ್ಯಾಹ್ನ ಆರತಿ, ಸಂಜೆ ಧೂಪಾರತಿ ನೆರವೇರಲಿದೆ. ಮಹೋತ್ಸವದ ಸಮಾರೋಪದ ಅಂಗವಾಗಿ ಜು.30ರಂದು ಮಧ್ಯಾಹ್ನ 1.30ರಿಂದ ನಗರದ ಪ್ರಮುಖ ಬೀದಿಗಳಲ್ಲಿ ಸಾಯಿಬಾಬಾ ಅವರ ಉತ್ಸವ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು.

---

# 81 ಗ್ರಾಂ ತೂಕದ ಚಿನ್ನಾಭರಣ, ನಗದು ಕಳವು

• ಪ್ರಜೋದಯ ವರದಿ

**ಆಲೂರು:** ಮನೆಯ ಕೀ ಸಹಾಯದಿಂದ ಒಳಪ್ರವೇಶಿಸಿರುವ ಕಳ್ಳರು 81 ಗ್ರಾಂ ತೂಕದ ಚಿನ್ನಾಭರಣ ಹಾಗು 39 ಸಾವಿರ ರೂ. ನಗದು ಕದ್ದಿರುವ ಘಟನೆ ತಾಲ್ಲೂಕಿನ ಬೀರಕನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಸುಧಾಮಣಿ ಅವರು ಮನೆಗೆ ಬೀಗ ಹಾಕಿ ಕೀಯನ್ನು ಹೊರಗಡೆ ಇಟ್ಟು ಕುಟುಂಬ ಸಮೇತ ಊರಿಗೆ ತೆರಳಿದ್ದರು. ಜು.16ರಿಂದ 20ರ ಅವಧಿಯಲ್ಲಿ ಕಳ್ಳತನ ನಡೆದಿದ್ದು, ಕೀ ಇಟ್ಟಿರುವ ಜಾಗವನ್ನು ಮೊದಲೇ ಗೊತ್ತು ಮಾಡಿಕೊಂಡಿದ್ದ ಕಳ್ಳರು ಅದರ ನೆರವಿನಿಂದ ಒಳಪ್ರವೇಶಿಸಿ ಬೀರುವಿನಲ್ಲಿಟ್ಟಿದ್ದ 81 ಗ್ರಾಂ ತೂಕದ ಚಿನ್ನಾಭರಣ ಹಾಗು 39 ಸಾವಿರ ರೂ. ಕದ್ದಿದ್ದಾರೆ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಅಪಘಾತ: ಬಸ್ ನಿರ್ವಾಹಕ ಸಾವು**

• ಪ್ರಜೋದಯ ವರದಿ

**ಹಾಸನ:** ಕ್ಯಾಂಟರ್ ಡಿಕ್ಕಿಯಾಗಿ ಬಿಎಂಟಿಸಿ ಬಸ್ ನಿರ್ವಾಹಕ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಶಾಂತಿಗ್ರಾಮ ಬಳಿ ನಡೆದಿದೆ.

ಬೇಲೂರು ತಾಲ್ಲೂಕು ಹುಣಸಿನಕೆರೆ ಗ್ರಾಮದ ಮೋಹನ್‌ಕುಮಾರ್ (36)ಮೃತರು. ರಜೆ ಹಿನ್ನಲೆಯಲ್ಲಿ ಊರಿಗೆ ಬಂದಿದ್ದ ಮೋಹನ್‌ಕುಮಾರ್ ಜು.21ರ ಬೆಳಿಗ್ಗೆ 4 ಗಂಟೆ ಸಮಯದಲ್ಲಿ ಬೆಂಗಳೂರಿಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಕ್ಯಾಂಟರ್ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪುರದಮ್ಮ ದೇವಾಲಯದ ಬಳಿ ಸ್ವಚ್ಛತೆಗೆ ಒತ್ತು

• ಪ್ರಜೋದಯ ವರದಿ



**ಹಾಸನ:** ಪುರದಮ್ಮ ದೇವಾಲಯದ ಬಳಿ ಭಕ್ತರಿಗೆ ಸ್ವಚ್ಛ, ಸುಸಜ್ಜಿತ ಹಾಗು ಆರೋಗ್ಯಕರ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ಹಂತ ಹಂತವಾಗಿ ಆರಂಭಗೊಂಡಿವೆ. ಮೊದಲ ಹಂತವಾಗಿ ದೇವಾಲಯ ಆವರಣದಲ್ಲಿರುವ ಶೌಚಾಲಯಗಳ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ದೇವಾಲಯಕ್ಕೆ ಪ್ರತಿನಿತ್ಯ ಹಾಗು ವಿಶೇಷ ದಿನಗಳಲ್ಲಿ ಸಾವಿರಾರು ಭಕ್ತರು ಆಗಮಿಸುವ ಹಿನ್ನಲೆ ಶೌಚಾಲ ಯಗಳ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡುವುದು ಅತ್ಯಗತ್ಯ. ಈ ಉದ್ದೇಶದಿಂದ ಹೀರುವ ಯಂತ್ರದ ಮೂಲಕ ಸಮಗ್ರ ಸ್ವಚ್ಛತಾ ಕಾರ್ಯಕೈಗೊಂಡು ಸ್ವಚ್ಛತೆಗೆ ಒತ್ತು ನೀಡಲಾಗದೆ.

ಕೆಲ ತಿಂಗಳ ಹಿಂದೆ ದೇವಾಲಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಪಾರದರ್ಶಕ ಆಡಳಿತ, ಮೂಲಭೂತ ಸೌಲಭ್ಯಗಳ ವಿಸ್ತರಣೆ ಹಾಗು ಸ್ವಚ್ಛತೆಗೆ ಆದ್ಯತೆ ನೀಡಲಾಗುವುದೆಂಬ ಭರವಸೆಯಂತೆ ಕ್ರಮ ವಹಿಸಲಾಗಿದೆ ಎಂದು ದೇವಾಲಯದ ಕಾರ್ಯ ನಿರ್ವಾಹಣಾಧಿಕಾರಿ ಪ್ರಕಾಶ್ ಕುಮಾರ್ ತಿಳಿಸಿದ್ದಾರೆ.

ದೇವಾಲಯದಲ್ಲಿ ಸ್ವಚ್ಛತೆ, ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ಭಕ್ತರಿಗೆ ಅಗತ್ಯ ಸೌಕ ರ್ಯಗಳ ವಿಸ್ತರಣೆ ಸೇರಿ ಅಲ್ಪಾವಧಿ ಹಾಗು ದೀರ್ಘಾವಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಭಕ್ತರ ಅನುಕೂಲವೇ ಮೊದಲ ಆದ್ಯತೆಯಾಗಿದ್ದು, ದೇವಾಲಯದ ಪಾವಿತ್ರ್ಯ, ಸ್ವಚ್ಛತೆ ಹಾಗು ವ್ಯವಸ್ಥಿತ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರು, ತ್ಯಾಜ್ಯ ನಿರ್ವಹಣೆ, ಸ್ವಚ್ಛ ಪರಿಸರ ಹಾಗೂ ಇತರೆ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೂ ವೇಗ ನೀಡಲಾಗುವುದೆಂದು ತಿಳಿಸಿದ್ದಾರೆ.

# ಸರ್ಕಾರಿ ಶಾಲೆ ಅಭಿವೃದ್ಧಿಗೆ ಹಳೆಯ ವಿದ್ಯಾರ್ಥಿಗಳ ನೆರವು ಅಗತ್ಯ

• ಪ್ರಜೋದಯ ವರದಿ




**ಚನ್ನರಾಯಪಟ್ಟಣ:** ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಹಳೆಯ ವಿದ್ಯಾರ್ಥಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಮಾಧ್ಯಮಿಕ ಶಾಲಾ ಆವರಣದಲ್ಲಿರುವ ಪಿಎಂಶ್ರೀ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ತಾಲ್ಲೂಕಿನ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿಯ 9,271 ವಿದ್ಯಾರ್ಥಿಗಳಿಗೆ ವಿದ್ಯಾ ವಿಕಾಸ ಯೋಜನೆಯಡಿ ಶೂ, ಸಾಕ್ಸ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಾಲಾ ಶಿಕ್ಷಣದ ಸಾರ್ವತ್ರೀಕರಣ ಬೇಡಿಕೆ ಸಾಕಾರಗೊಳ್ಳಬೇಕಾದರೆ ಸಮುದಾಯದ ಪಾಲ್ಗೊಳ್ಳುವಿಕೆ ಮುಖ್ಯವೆಂದರು.

ಶಾಲೆ ಅಭಿವೃದ್ಧಿಗೆ ಹಳೆಯ ವಿದ್ಯಾರ್ಥಿಗಳು ಕೊಡುಗೆ ನೀಡಬೇಕು. ಅದರಿಂದ ಸರ್ಕಾರಿ ಶಾಲೆಗಳ ಉನ್ನತೀಕರಣವಾಗುವ ಜೊತೆಗೆ ಸಮಸ್ಯೆಗಳು ನಿವಾರಣೆಯಾಗುತ್ತವೆ. ಸರ್ಕಾರಿ ಶಾಲೆಯಲ್ಲಿ ಓದಿ ಉನ್ನತ ಹುದ್ದೆ ಅಲಂಕರಿಸಿರುವ ಹಳೆಯ ವಿದ್ಯಾರ್ಥಿಗಳನ್ನು ಗುರುತಿಸಿ ಶಿಕ್ಷಕರು ಶಾಲಾ ಅಭಿವೃದ್ಧಿಗೆ ಪ್ರೋತ್ಸಾಹ ನೀಡಬೇಕೆಂದರು.

ಓದಿದ ಶಾಲೆಗೆ ಮರಳಿ ನೆರವು ನೀಡುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಮತ್ತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದರಿಂದ ಗ್ರಾಮೀಣ ಭಾಗದ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಶಿಕ್ಷಣದಿಂದ ಮಾತ್ರ ಸಮಾಜಕ್ಕೆ ಉತ್ತಮ ನಾಗರಿಕರನ್ನು ನೀಡಲು ಸಾಧ್ಯ. ಪಾಲಕರು ಶಿಕ್ಷಕರಿಗೆ ಸಹಕಾರ ನೀಡಿದರೆ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬಹುದೆಂದು ಸಲಹೆ ನೀಡಿದರು.

ಪ್ರತಿ ಗ್ರಾಮ ಪಂಚಾಯಿತಿಯಲ್ಲಿ 1 ರಿಂದ 10ನೇ ತರಗತಿ ವರೆಗೆ ಎಲ್ಲಾ ಸೌಕರ್ಯಗಳಿರುವ ಸುಸಜ್ಜಿತ ಶಾಲೆ ನಿರ್ಮಾಣವಾಗುವುದು ಗ್ರಾಮೀಣ ಭಾಗದ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಅಗತ್ಯವಾಗಿದೆ. ಎಲ್ಲಾ ವಿಷಯಗಳಿಗೂ ನುರಿತ ಶಿಕ್ಷಕರಿಂದ ಬೋಧನೆ, ಆಟದ ಮೈದಾನ, ಸ್ಮಾರ್ಟ್ ತರಗತಿ, ಶೌಚಾಲಯ, ಶುಚಿ-ರುಚಿಯಾದ ಬಿಸಿಯೂಟದೊಂದಿಗೆ ಸುತ್ತಲಿನ ಹಳ್ಳಿಗಳ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬರಲು ಮತ್ತು ಪುನಃ ಮನೆಗೆ ತಲುಪಿಸಲು ವಾಹನ ವ್ಯವಸ್ಥೆಯೊಂದಿಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇಂತಹ ಶಾಲೆಗಳು ನಿರ್ಮಾಣ ವಾದರೆ, ಗ್ರಾಮೀಣ ಭಾಗದ ಮಕ್ಕಳು ನಗರ ಪ್ರದೇಶದ ಖಾಸಗಿ ಶಾಲೆಗಳ ಪೈಪೋಟಿಗೆ ಸರಿಸಮಾನವಾಗಿ ಬೆಳೆಯಲು ಸಾಧ್ಯವಾಗುತ್ತದೆಂದರು.

ಶಿಕ್ಷಕರು ಪಠ್ಯ ಬೋಧನೆ ಜೊತೆಗೆ ವಿದ್ಯಾರ್ಥಿಗಳಿಗೆ ಸಂಸ್ಕಾರ ಕಲಿಸಿ, ಸಮಾಜದಲ್ಲಿ ಸುಂದರ ಬದುಕು ಕಟ್ಟಿಕೊಳ್ಳವಂತೆ ಮಾಡಬೇಕು. ಮಕ್ಕಳಿಗೆ ಕೇವಲ ಪುಸ್ತಕದ ಜ್ಞಾನ ನೀಡಿದರೆ ಸಾಲದು, ಅದರೊಂದಿಗೆ ಜೀವನದ ಮೌಲ್ಯಗಳನ್ನು ಕಲಿಸುವ ನೀತಿ ಪಾಠ ಕೂಡ ಅತ್ಯಗತ್ಯ. ಇದು ಅವರ ವ್ಯಕ್ತಿತ್ವ ರೂಪಿಸಲು ಸಹಾಯ ಮಾಡುತ್ತದೆಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಹೆಚ್.ಸತೀಶ್, ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ಕೆ.ಎನ್.ಅನಿಲ್ ಮಾತನಾಡಿದರು. ಪುರಸಭೆ ಮಾಜಿ ಅಧ್ಯಕ್ಷ ಬನಶಂಕರಿ ರಘು, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಉಮಾಶಂಕರ್, ಶಿಕ್ಷಣ ಸಂಯೋಜಕರಾದ ಲೋಕೇಶ್, ಶ್ರೀನಿವಾಸ್, ಕರಿಯಪ್ಪಗೌಡ, ಯಾದವರಾಜು, ಸಮೂಹ ಸಂಪನ್ಮೂಲ ವ್ಯಕ್ತಿ ಲಿಂಗರಾಜು, ಪಿಎಂಶ್ರೀ ಶಾಲೆಯ ಶಾಲೆಯ ಮುಖ್ಯ ಶಿಕ್ಷಕ ಬಿ.ಎಂ.ಸುರೇಶ್ ಮತ್ತಿತರರಿದ್ದರು.

# ಕಾಣೆಯಾದವರ ಪತ್ತೆಗೆ ಮನವಿ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಬೆಂಗಳೂರಿಗೆ ಹೋಗುತ್ತೇನೆಂದು ತೆರಳಿದ್ದ ವ್ಯಕ್ತಿ ನಾಪತ್ತೆಯಾಗಿದ್ದು ಸುಳಿವು ಸಿಕ್ಕರೆ ಮಾಹಿತಿ ನೀಡಲು ಹಿರೀಸಾವೆ ಪೊಲೀಸರು ಕೋರಿದ್ದಾರೆ.

ತಾಲ್ಲೂಕಿನ ಬಾಳಗಂಚಿ ಗ್ರಾಮದ ಜಯರಾಮ್ (43) ಕಾಣೆಯಾದ ವ್ಯಕ್ತಿ. ಗಾರೆ ಕೆಲಸ ಮಾಡಿಕೊಂಡಿದ್ದ ಅವರು ಕೆಲಸದ ನಿಮಿತ್ತ ಬೇರೆ ಊರುಗಳಿಗೆ ಹೋಗಿ ಮೂರ್ನಾಲ್ಕು ದಿನಗಳ ಬಳಿಕ ವಾಪಾಸ್ಸಾಗುತ್ತಿದ್ದರು. ಆದರೆ ಜೂ.16ರಂದು ಅತ್ತೆ ಜಯಮ್ಮ ಅವರಿಗೆ ಬೆಂಗಳೂರಿಗೆ ಹೋಗಿ ಬರುತ್ತೇನೆಂದು ಹೇಳಿ ಹೋದವರು ಈ ವರೆಗೆ ವಾಪಾಸ್ಸಾಗಿಲ್ಲ. ಸಂಬಂಧಿಕರು, ಸ್ನೇಹಿತರ ಬಳಿ ವಿಚಾರಿಸಿದರೂ ಸುಳಿವು ಸಿಕ್ಕಿಲ್ಲ.

ಕಾಣೆಯಾಗಿರುವ ಜಯರಾಮ್ 5.3 ಅಡಿ ಎತ್ತರವಿದ್ದು ದುಂಡು ಮುಖ, ಸಾಧಾರಣ ಮೈಕಟ್ಟು ಹಾಗು ಕಪ್ಪು ಬಣ್ಣ ಹೊಂದಿದ್ದಾರೆ. ಮನೆಯಿಂದ ಹೋಗುವಾಗ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಆಕಾಶ ಬಣ್ಣದ ಅಂಗಿ ಹಾಗು ಕೆಂಪು ಬಣ್ಣದ ಟವೆಲ್ ಧರಿಸಿದ್ದರು. ಬಲಗೈ ಮೇಲೆ ಬಾಣದ ಗುರುತಿನೊಂದಿಗೆ ಹೃದಯದ ಚಿಹ್ನೆ ಹಚ್ಚೆ ಹಾಕಿಸಿಕೊಂಡಿದ್ದಾರೆ. ಸುಳಿವು ಗೊತ್ತಾದರೆ 08176-252237 ಅಥವಾ 9480804770 ಇಲ್ಲಿಗೆ ಸಂಪರ್ಕಿಸುವಂತೆ ಕೋರಿದೆ.

---

# ಎನ್‌ಡಿಎಗೆ ಬೆಂಬಲ ವದಂತಿ: ಮೋದಿ ಭೇಟಿಯಾದ ಶರದ್ ಪವಾರ್

• ಪ್ರಜೋದಯ ವರದಿ

**ನವದೆಹಲಿ:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಕುರಿತು ಸಿಜೆಪಿ ಹಾಗೂ ವಿರೋಧ ಪಕ್ಷಗಳ ಆಕ್ರೋಶ ತೀವ್ರ ಗೊಂಡಿರುವ ಬೆನ್ನಲ್ಲೇ ರಾಜಕೀಯ ವಲಯದಲ್ಲಿ ಮಹತ್ವದ ಬೆಳವಣಿಗೆಯೊಂದು ನಡೆದಿದೆ.

ಎನ್‌ಸಿಪಿ (ಎಸ್‌ಪಿ) ನಾಯಕ ಶರದ್ ಪವಾರ್ ಅವರು ಬುಧ ವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಬುಧವಾರ ಬೆಳಿಗ್ಗೆ ಪ್ರಧಾನಮಂತ್ರಿಗಳ ಕಚೇರಿಗೆ (ಪಿಎಂಒ) ಆಗಮಿಸಿದ ಶರದ್ ಪವಾರ್ ಅವರನ್ನು ಪ್ರಧಾನಿ ಮೋದಿ ಆತ್ಮೀಯವಾಗಿ ಬರಮಾಡಿ ಕೊಂಡರು. ತಾವೇ ಖುದ್ದು ಬಾಗಿಲ ಬಳಿಗೆ ಬಂದು ಸ್ವಾಗತಿಸಿದರು. ಈ ಭೇಟಿಗೆ ಸಂಬಂಧಿಸಿದ ಫೋಟೊಗಳನ್ನು ಪ್ರಧಾನಿ ಅವರ ಕಚೇರಿ ತನ್ನ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದೆ. ಈ ಸಭೆಯಲ್ಲಿ ಶರದ್ ಪವಾರ್ ಅವರ ಪುತ್ರಿ, ಸಂಸದೆ ಸುಪ್ರಿಯಾ ಸುಳೆ ಅವರೂ ಪಾಲ್ಗೊಂಡಿ ದ್ದರು. ಭೇಟಿಯ ವೇಳೆ ಉಭಯ ನಾಯಕರು ಹಲವು ವಿಷಯಗಳ ಕುರಿತು ಚರ್ಚಿಸಿದರು. ರೈತರ ಸಮಸ್ಯೆಗಳು ಹಾಗೂ ಕೃಷಿ ಕ್ಷೇತ್ರದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಶರದ್ ಪವಾರ್ ಅವರು ಪ್ರಧಾನಿಗೆ ಮನವಿ ಪತ್ರವೊಂದನ್ನು ಸಲ್ಲಿಸಿದರು.

ಶರದ್ ಪವಾರ್ ಅವರು ಎನ್‌ಡಿಎ ಮೈತ್ರಿಕೂಟಕ್ಕೆ ಬೆಂಬಲ ನೀಡಲಿದೆ ಎಂಬ ವದಂತಿಗಳು ಹರಿದಾಡುತ್ತಿರುವ ಬೆನ್ನಲ್ಲೇ ಈ ಭೇಟಿ ತೀವ್ರ ಕುತೂಹಲ ಮೂಡಿಸಿದೆ. ಆದರೆ, ಪ್ರಧಾನಿ ಭೇಟಿ ಬೆನ್ನಲ್ಲೇ ಸುಪ್ರಿಯಾ ಸುಳೆ ವಿಪಕ್ಷಗಳ ಸಭೆಯಲ್ಲೂ ಭಾಗವಹಿಸಿದ್ದು ವಿಶೇಷವಾಗಿತ್ತು.

# ಜಿಲ್ಲೆಯಲ್ಲಿ ಶೇ.81 ರಷ್ಟು ಎಸ್‌ಐಆರ್ ಗಣಕೀಕರಣ

• ಪ್ರಜೋದಯ ವರದಿ

**ಹಾಸನ:** ಮತದಾರರಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)ಯಲ್ಲಿ ಗಣತಿ ನಮೂನೆಗಳ ಗಣಕೀ ಕರಣ ಮಾಡುವ ಪ್ರಕ್ರಿಯೆ ಜಿಲ್ಲೆಯಲ್ಲಿ ಶೇ.81ರಷ್ಟು ಪೂರ್ಣಗೊಂಡಿದೆ.

ಈಗಾಗಲೇ ಶೇ.100ರಷ್ಟು (15, 42,802) ಎಸ್‌ಆರ್‌ಐ ಗಣತಿ ನಮೂನೆಯನ್ನು ಮತದಾರರಿಗೆ ವಿತರಣೆ ಮಾಡಲಾಗಿದೆ. ಇದೀಗ ನಮೂನೆಯನ್ನು ವಾಪಾಸ್ ಪಡೆದು ಗಣಕೀಕರಣ ಮಾಡುವ ಪ್ರಕ್ರಿಯೆ ಚುರುಕು ಗೊಂಡಿದ್ದು, 12,64,505 ಮತದಾರರ ಮಾಹಿತಿಯನ್ನು ಗಣಕೀ ಕರಣ ಮಾಡಲಾಗಿದೆ. ಈ ಮೂಲಕ ಬುಧವಾರದ ಅಂತ್ಯಕ್ಕೆ ಶೇ.81.96 ರಷ್ಟು ಪ್ರಕ್ರಿಯೆ ಪೂರ್ಣಗೊಂಡಿದೆ.

ಶ್ರವಣಬೆಳಗೊಳ ಕ್ಷೇತ್ರದಲ್ಲಿ 1, 76,568, ಅರಸೀಕೆರೆಯಲ್ಲಿ 1,92, 763, ಬೇಲೂರು 1,71,472, ಹಾಸನ 1,74,924, ಹೊಳೆನರಸೀಪುರ 1,87,641, ಅರಕಲಗೂಡು 1,90,805, ಆಲೂರು-ಸಕಲೇಶಪುರ ಕ್ಷೇತ್ರದಲ್ಲಿ 1,70,332 ಮತದಾರರ ಗಣತಿ ನಮೂನೆಗಳ ಗಣಕೀಕರಣ ನಡೆದಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾಹಿತಿ ನೀಡಿದ್ದಾರೆ.

ಆನ್‌ಲೈನ್ ಮೂಲಕವೂ ಮತ ದಾರರಪಟ್ಟಿ ವಿಶೇಷ ಸಮಗ್ರ ಪರಿ ಷ್ಕರಣೆಗೆ ಅವಕಾಶ ನೀಡಿದ್ದು, ಜಿಲ್ಲೆ ಯಲ್ಲಿ 3,138 ಮತದಾರರು ಆನ್‌ಲೈನ್ ಮೂಲಕವೇ ಭಾಗವಹಿಸಿದ್ದಾರೆ. ಆ.8 ರವರೆಗೂ ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ಎಸ್‌ಐಆರ್ ಪ್ರಕ್ರಿಯೆ ನಡೆಸಲಿದ್ದಾರೆ. ಈಗಾಗಲೇ ಗಣತಿ ನಮೂನೆ ಪಡೆದಿರುವ ಮತದಾರರು ಭರ್ತಿ ಮಾಡಿ, ವಾಪಾಸ್ ನೀಡಬೇಕೆಂದರು.

## ಭಾರತ ತಂಡಕ್ಕೆ ಕಠಿಣ ಸವಾಲು | 19ರಿಂದ 10ಕ್ಕೆ ಇಳಿದ ಕ್ರೀಡೆಗಳು

# ಇಂದಿನಿಂದ ಗ್ಲಾಸ್ಗೊದಲ್ಲಿ ಕಾಮನ್‌ವೆಲ್ತ್ ಗೇಮ್ಸ್

• ಪ್ರಜೋದಯ ವರದಿ

**ಗ್ಲಾಸ್ಗೊ:** ಪ್ರಮುಖ ಕ್ರೀಡಾಕೂಟವಾಗಿರುವ ಕಾಮನ್‌ವೆಲ್ತ್ ಗೇಮ್ಸ್‌ನ 23ನೇ ಆವೃತ್ತಿಯು ಸ್ಕಾಟ್‌ಲ್ಯಾಂಡ್‌ನ ಗ್ಲಾಸ್ಗೊದಲ್ಲಿ ಇಂದಿನಿಂದ (ಜುಲೈ 23ರಂದು) ಆರಂಭವಾಗುತ್ತಿದೆ. ಈ ಪಂದ್ಯಾವಳಿಯು ಆಗಸ್ಟ್ 2ರವರೆಗೆ ಜರುಗಲಿದೆ.

2026ನೇ ಸಾಲಿನ ಕಾಮನ್‌ವೆಲ್ತ್ ಗೇಮ್ಸ್ ಪಂದ್ಯಾವಳಿಯನ್ನು ಆಸ್ಟ್ರೇಲಿಯಾದ ವಿಕ್ಟೋರಿಯಾದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿತ್ತು. ಆದರೆ, ಹೆಚ್ಚುತ್ತಿರುವ ವೆಚ್ಚದ ಅಂದಾಜಿನಿಂದಾಗಿ ಆಸ್ಟ್ರೇಲಿಯಾವು ಅದರಿಂದ ಹಿಂದೆ ಸರಿಯಿತು. ಹಾಗಾಗಿ, ಈ ಕ್ರೀಡಾಕೂಟವನ್ನು ಕೈಗೆಟುಕುವ ವೆಚ್ಚದಲ್ಲಿ ಮತ್ತು ಸರಳೀಕೃತ ಮಾದರಿಯಲ್ಲಿ ನಡೆಸಲು ಗ್ಲಾಸ್ಗೊ ಮುಂದೆ ಬಂದಿತು.

2022ರಲ್ಲಿ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಒಟ್ಟು 19 ಕ್ರೀಡೆಗಳಿದ್ದವು. ಅದರ ಸಂಖ್ಯೆಯನ್ನು 10ಕ್ಕೆ ಇಳಿಸಲಾಗಿದ್ದು, ಪ್ರಮುಖ ಕ್ರೀಡೆಗಳಿಗೆ ಮಾತ್ರ ಒತ್ತು ಕೊಡಲಾಗಿದೆ. ಅಥ್ಲೆಟಿಕ್ಸ್, ಈಜು, ವೇಟ್ ಲಿಫ್ಟಿಂಗ್, ಬಾಕ್ಸಿಂಗ್, ಜೂಡೋ, ಬಾಸ್ಕೆಟ್‌ಬಾಲ್, ಜಿಮ್ನಾಸ್ಟಿಕ್ಸ್, ಟ್ರ್ಯಾಕ್ ಸೈಕ್ಲಿಂಗ್, ಲಾನ್ ಬೌಲ್ಸ್ ಮತ್ತು ನೆಟ್‌ಬಾಲ್ ಕ್ರೀಡೆಗಳು ಈ ಬಾರಿ ನಡೆಯಲಿವೆ. ಗ್ಲಾಸ್ಗೊದಲ್ಲಿರುವ ನಾಲ್ಕು ಪ್ರಮುಖ ಕ್ರೀಡಾಂಗಣಗಳಲ್ಲಿಯೇ ಈ ಎಲ್ಲಾ ಕ್ರೀಡೆಗಳನ್ನು ಆಯೋಜನೆ ಮಾಡಲಾಗಿದ್ದು, 8 ಮೈಲಿ ವ್ಯಾಪ್ತಿಯಲ್ಲಿ ಈ ಮೈದಾನಗಳಿವೆ.






ಗ್ಲಾಸ್ಗೊ ಕ್ರೀಡಾಕೂಟದಲ್ಲಿ ಹಲವು ಕ್ರೀಡೆಗಳನ್ನು ಕೈಬಿಟ್ಟಿರುವುದು ಭಾರತದ ಪದಕಗಳ ಪಟ್ಟಿಗೆ ದೊಡ್ಡ ಹೊಡೆತ ನೀಡುವ ಸಾಧ್ಯತೆಯಿದೆ. ಭಾರತಕ್ಕೆ ಹೆಚ್ಚು ಪದಕ ತಂದುಕೊಡುತ್ತಿದ್ದ ಕುಸ್ತಿ, ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ಹಾಕಿ ಮತ್ತು ಶೂಟಿಂಗ್ ಕ್ರೀಡೆಗಳನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ. 2022ರ ಕ್ರೀಡಾಕೂಟದಲ್ಲಿ ಭಾರತ ಗೆದ್ದಿದ್ದ ಒಟ್ಟು ಚಿನ್ನದ ಪದಕಗಳಲ್ಲಿ ಶೇ.60ಕ್ಕಿಂತ ಹೆಚ್ಚು ಈ ಕ್ರೀಡೆಗಳಿಂದಲೇ ಬಂದಿದ್ದವು. ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದಿದ್ದ 2022ರ ಆವೃತ್ತಿಯಲ್ಲಿ ಭಾರತ ತಂಡವು 61 ಪದಕಗಳೊಂದಿಗೆ (22 ಚಿನ್ನ, 16 ಬೆಳ್ಳಿ ಮತ್ತು 23 ಕಂಚು) ನಾಲ್ಕನೇ ಸ್ಥಾನ ಪಡೆದಿತ್ತು.

ಪ್ರಮುಖ ಕ್ರೀಡೆಗಳು ಇಲ್ಲದಿದ್ದರೂ ಭಾರತವು ಎಂಟು ಕ್ರೀಡಾ ವಿಭಾಗಗಳಲ್ಲಿ ಸ್ಪರ್ಧಿಸಲಿದೆ. ಅಥ್ಲೆಟಿಕ್ಸ್, ಬಾಕ್ಸಿಂಗ್, ವೇಟ್‌ಲಿಫ್ಟಿಂಗ್, ಜೂಡೋ, ಟ್ರ್ಯಾಕ್ ಸೈಕ್ಲಿಂಗ್, ಈಜು ಮತ್ತು ಪ್ಯಾರಾ- ಕ್ರೀಡೆಗಳಲ್ಲಿ ಸ್ಪರ್ಧಿಸಲು ಸುಮಾರು 135 ಸದಸ್ಯರ ಪ್ರಬಲ ತಂಡವನ್ನು ಕಳುಹಿಸಿದೆ.

ಜಾವಲೀನ್‌ನಲ್ಲಿ ನೀರಜ್ ಚೋಪ್ರಾ, ವೇಟ್ ಲಿಫ್ಟಿಂಗ್‌ನಲ್ಲಿ ಮೀರಾಬಾಯಿ ಚಾನು, ಅಚಿಂತ ಶೆಯುಲಿ ಮತ್ತು ಬಿಂದ್ಯಾರಾಣಿ ದೇವಿ, ಬಾಕ್ಸಿಂಗ್‌ನಲ್ಲಿ ಲವ್‌ಲಿನಾ ಬೊರ್ಗೊಹೈನ್ ಅವರು ಈ ಬಾರಿಯೂ ಉತ್ತಮ ಪ್ರದರ್ಶನ ನೀಡುವ ನಿರೀಕ್ಷೆಯಿದೆ.

2030ರಂದು ನೂರನೇ ವರ್ಷದ ಕಾಮನ್‌ವೆಲ್ತ್ ಗೇಮ್ಸ್, ಅಹಮದಾಬಾದ್‌ನಲ್ಲಿ ನಡೆಯಲಿದೆ. ಹಾಗಾಗಿ, ಇಲ್ಲಿನ ಹಲವು ಕಾರಣಗಳಿಂದಾಗಿ ಭಾರತದ ಪಾಲಿಗೆ ಈ ಕ್ರೀಡಾಕೂಟವು ಮಹತ್ವದ್ದಾಗಿದೆ. ಗ್ಲಾಸ್ಗೊ ಸಮಾರೋಪ ಸಮಾರಂಭದಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟದ ಧ್ವಜವನ್ನು ಅಧಿಕೃತವಾಗಿ ಭಾರತಕ್ಕೆ ಹಸ್ತಾಂತರಿಸಲಾಗುತ್ತದೆ. ಈ ವೇಳೆ ಭಾರತದ ಸಾಂಸ್ಕೃತಿಕ ವೈಭವವನ್ನು ತೋರಿಸುವ 20 ನಿಮಿಷಗಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ಶಂಕರ್ ಮಹದೇವನ್ ಮತ್ತು ನಟಿ ರಶ್ಮಿಕಾ ಮಂದಣ್ಣ ಅವರು ಪ್ರದರ್ಶಿಸಲಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019